ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 ಸಂಚಿಕೆ 23 ಆಗಸ್ಟ್ 19, 1979 40 ಪೈಸೆ

ಚರಣ್ ಸರಕಾರಕ್ಕೆ ಬೆಂಬಲ

ಆಗಸ್ಟ್ 20ರಂದು ಲೋಕಸಭಾಧಿವೇಶನ ಸೇರುವಾಗ ಶ್ರೀ ಚರಣ್ ಸಿಂಗ್‌ರವರ ನೇತೃತ್ವದ ಕೇಂದ್ರ ಸರಕಾರದ ಭವಿಷ್ಯ ತೀರ್ಮಾನವಾಗಲಿದೆ. ಸರಕಾರದಲ್ಲಿ ವಿಶ್ವಾಸ ವ್ಯಕ್ತಪಡಿಸುವ ನಿರ್ಣಯವನ್ನು ಪ್ರಧಾನಮಂತ್ರಿಯವರು ಮಂಡಿಸಲಿದ್ದಾರೆ. ಅದಕ್ಕೆಷ್ಟು ಬೆಂಬಲ ದೊರೆಯುತ್ತದೆ ಎಂಬುದನ್ನು ಭಾರತದ ಜನತೆ ಅತ್ಯಂತ ಕುತೂಹಲದಿಂದ ನೋಡುತ್ತಿದೆ.

ಲೋಕಸಭೆಯಲ್ಲಿ ಈ ವಿಶ್ವಾಸ ನಿರ್ಣಯ ಬಂದಾಗ ಅದಕ್ಕೆ ಬೆಂಬಲ ನೀಡುವ ತೀರ್ಮಾನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ತೆಗೆದುಕೊಂಡಿದೆ. ಇದು ಮಹತ್ವದ ತೀರ್ಮಾನವಾಗಿದೆ. ಈ ತೀರ್ಮಾನವು ಎಲ್ಲಾ ಕೋಮುವಾರು ವಿರೋಧಿ ಮತ್ತು ಸರ್ವಾಧಿಕಾರಿ ವಿರೋಧಿ ಶಕ್ತಿಗಳನ್ನೆಲ್ಲಾ ಒಂದುಗೂಡಿಸುವ ಕಾರ್ಯದಲ್ಲಿ ನಿರ್ಣಾಯಕ ಪಾತ್ರ ವಹಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಚರಣ್‌ಸಿಂಗ್‌ರವರು ಕಾಂಗ್ರೆಸ್ (ಎಸ್) ಜೊತೆಗೆ ಸರಕಾರ ರಚಿಸಲು ಮುಂದೆ ಬಂದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇತರ ಎಡ ಪಕ್ಷಗಳೊಂದಿಗೆ ಸೇರಿ ಈ ಒಕ್ಕೂಟಕ್ಕೆ ಬೆಂಬಲ ಕೊಡುವ ತೀರ್ಮಾನಕ್ಕೆ ಬಂದಿತ್ತು, ಆದರೆ ಈ ಒಕ್ಕೂಟವು ರಚಿಸುವ ಸರಕಾರವು ಇಂದಿರಾ

ಸಂಪಾದಕೀಯ

ಕಾಂಗ್ರೆಸ್ಸಿನ ಬೆಂಬಲವನ್ನು ಅವಲಂಬಿಸಿದೆ ಎನ್ನುವಾಗ ನಾವು ನಮ್ಮ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕಾಯಿತು. ಏಕೆಂದರೆ, ಇಂದಿರಾ ಕಾಂಗ್ರೆಸ್ಸಿನ ಅವಲಂಬಿತ ಸರಕಾರಕ್ಕಾಗಲಿ ಅಥವಾ ಆರ್. ಎಸ್. ಎಸ್, ಜನಸಂಘಗಳ ನಿಯಂತ್ರಿತ ಪಕ್ಷವಾದ ಜನತಾಪಕ್ಷದ ಸರಕಾರಗಳಿಗಾಗಲಿ ಬೆಂಬಲ ನೀಡುವುದಕ್ಕೆ ನಮ್ಮ ವಿರೋಧವಿತ್ತು.

ಆದರೆ, ಜನಸಂಘಕ್ಕೆ ತಾನು ವಿರೋಧಿ ಎಂದು ಹೇಳಿ ಚರಣ್‌ಸಿಂಗ್‌ರವರ ಸರಕಾರ ರಚನೆಗೆ ಬೆಂಬಲ ನೀಡಿದ ಇಂದಿರಾ ಕಾಂಗ್ರೆಸ್ ಬಿಹಾರ್ ಶಾಸನ ಸಭೆಯಲ್ಲಿ ಆರ್. ಎಸ್. ಎಸ್.-ಜನಸಂಘಗಳ ಪ್ರಭಾವಿತ ಜನತಾ ಪಕ್ಷದ ಮಂತ್ರಿಮಂಡಲಕ್ಕೆ ಬೆಂಬಲ ನೀಡಿತು ಮತ್ತು ಚರಣ್‌ಸಿಂಗ್‌ರವರಿಗೆ ಸರಕಾರ ರಚಿಸಲು ಕೊಟ್ಟ ಬೆಂಬಲವು ಅಲ್ಲಿಗೆ ಮುಕ್ತಾಯವಾಯಿತೆಂದು ಸಾರಲಾಯಿತು. ಇದರಿಂದ ಇಂದಿರಾ ಕಾಂಗ್ರೆಸ್ಸಿನ ನಿಜವಾದ ಬಣ್ಣ ಬಯಲಾಯಿತು.

ಚರಣ್‌ಸಿಂಗ್‌ರವರ ಸರಕಾರವಾದರೂ ಕೆಲವು ಮುಖ್ಯ ತೀರ್ಮಾನಗಳನ್ನು ತೆಗೆದುಕೊಂಡಿದೆ. ಕಡ್ಡಾಯ ಠೇವಣಿಯ ಮರುಪಾವತಿಯನ್ನು

[ಕಡೆಯ ಪುಟ ನೋಡಿ]

ಕೋಮುವಾದಕ್ಕೆ ರಾಜಕೀಯ ಪ್ರತಿರೋಧ

ಕೇಂದ್ರ ಗೃಹಮಂತ್ರಿ ವೈ. ಬಿ. ಚವಾಣ್ ಅವರು ಆರೆಸ್ಸೆಸ್, ಜಮಾತೇ ಇಸ್ಲಾಮಿ ಮುಂತಾದ ಕೋಮುವಾದಿ, ಜಾತೀಯವಾದಿ ಸಂಘ ಸಂಸ್ಥೆಗಳನ್ನು ನಿಷೇಧಿಸಲಾಗುವುದಿಲ್ಲ; ಬದಲು ಅವುಗಳನ್ನು ರಾಜಕೀಯವಾಗಿ ಎದುರಿಸಲಾಗುವುದು ಎಂಬ ಹೇಳಿಕೆಯಿತ್ತಿದ್ದಾರೆ. ಕೋಮುವಾದಿ ಸಂಘಟನೆಗಳನ್ನು ರಾಜಕೀಯವಾಗಿ ಎದುರಿಸಿ ಸೋಲಿಸುವ ನೀತಿ ತೀರಾ ಸ್ವಾಗತಾರ್ಹ. ಯಾವುದೇ ಸಿದ್ಧಾಂತ ಅಥವಾ ತತ್ವ ಪ್ರಣಾಳಿಕೆಯನ್ನು ನಿಷೇಧ ಹೇರುವ ಮೂಲಕ ದಮನಿಸಲಾಗುವುದಿಲ್ಲವೆಂಬ ಕಟುಸತ್ಯ ಜಗತ್ತಿನ ಸಮಾಜವಾದಿ, ಸಮತಾವಾದಿ ಮತ್ತು ಕ್ರಾಂತಿಕಾರಿ ಚಳುವಳಿಗಳ ಇತಿಹಾಸದಿಂದ ವ್ಯಕ್ತವಾಗಿದೆ. ಸಮಾಜವಾದಿಗಳ ಮೇಲೆ, ಕಮ್ಯುನಿಸ್ಟ್ ಪಕ್ಷಗಳ ಮೇಲೆ ವಿಶ್ವಾದ್ಯಂತ ಬೇರೆ ಬೇರೆ ರಾಷ್ಟ್ರಗಳಲ್ಲಿ ದಮನಕಾರಿ ಕ್ರಮಗಳನ್ನು ಕೈಗೊಂಡಾಗಲೂ ಅವು ಮತ್ತಷ್ಟು ಪ್ರಬಲವಾಗಿ ಬೆಳೆದು ನಿಂತಿವೆ; ಅಪಾರ ಸಂಖ್ಯೆಯ ಆದರ್ಶವಾದಿಗಳನ್ನೂ ಬುದ್ಧಿಜೀವಿಗಳನ್ನೂ ಆಕರ್ಷಿಸಿವೆ. ಕಮ್ಯುನಿಸ್ಟ್ ಮತ್ತು ಸಮಾಜವಾದಿ ಸಿದ್ಧಾಂತಗಳಿಗೆ ಸಂಪೂರ್ಣ ವಿರುದ್ಧವಾಗಿರುವ ಹಿಂದೂ-ಮುಸ್ಲಿಂ ಕೋಮುವಾರು ಸಂಘಟನೆಗಳು ಮತ್ತು ಪ್ರತಿಗಾಮಿ ತತ್ವಗಳಿಗೂ ಈ ಮಾತು ಅನ್ವಯವಾಗುತ್ತದೆ. ಕಾನೂನಿನ ಮೂಲಕ ದಮನಿಸಿದಷ್ಟೂ ಅವು ಬೆಳೆಯುತ್ತವೆ. ಕಳೆದ ಮೂವತ್ತೆರಡು ವರ್ಷಗಳ ಇತಿಹಾಸದಲ್ಲಿ ಆರೆಸ್ಸೆಸ್‌ನಂತಹ ಕೋಮುವಾರು ಸಂಘಟನೆ ಬೆಳೆಯಲು ಅದನ್ನು ಕಾಂಗ್ರೆಸ್ ಸರಕಾರ ಎರಡು ಬಾರಿ ಕಾನೂನುಬಾಹಿರಗೊಳಿಸಿದ್ದೇ ಮುಖ್ಯ ಕಾರಣ.

ಈ ನಿಟ್ಟಿನಲ್ಲಿ ಚವಾಣ್ ಅವರ ಹೇಳಿಕೆಯನ್ನು ಮೆಚ್ಚಿಕೊಳ್ಳಬಹುದಾದರೂ, ಸ್ವತಃ ವೈ.ಬಿ. ಚವಾಣ್, ಅವರ ಪಕ್ಷ ಮತ್ತು ಅವರ ಸರಕಾರದಲ್ಲಿ ಭಾಗಿಗಳಾಗಿರುವ ಇತರ ಪಕ್ಷಗಳವರು ಒಪ್ಪಿರುವ ಕೆಲವು ಸಿದ್ಧಾಂತಗಳಿಂದ ಆರೆಸ್ಸೆಸ್‌ನಂತಹ ಸಂಕುಚಿತವಾದಿ, ಕೋಮುವಾದಿ ಸಂಘಟನೆಗಳನ್ನು ರಾಜಕೀಯವಾಗಿಯೂ, ಸೈದ್ಧಾಂತಿಕವಾಗಿಯೂ ಎದುರಿಸುವುದು ಸಾಧ್ಯವೇ ಎಂಬುದು ಸಂದೇಹಾಸ್ಪದ.

ಜಾತ್ಯತೀತತೆ, ಧರ್ಮನಿರಪೇಕ್ಷತೆ ಅಂದರೆ ಎಲ್ಲಾ ಮತಧರ್ಮಗಳಿಂದಲೂ ಪ್ರಭುತ್ವವು (ಸ್ಟೇಟ್) ಪ್ರತ್ಯೇಕವಾಗಿರಬೇಕೆಂದೇ ಅರ್ಥ. ಯಾವುದೇ ಮತ-ಧರ್ಮಗಳ ಅನುಯಾಯಿಗಳನ್ನು ಮೆಚ್ಚಿಸುವ ಸಲುವಾಗಿ ಕಾನೂನುಗಳನ್ನು ನಿರ್ಮಿಸುವ ಇಲ್ಲವೇ ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡಬಯಸುವ ಸರಕಾರಕ್ಕೆ ತಾನು ಜಾತ್ಯತೀತ ಸರಕಾರವೆಂದು ಕರೆಸಿಕೊಳ್ಳುವ ಅಧಿಕಾರವಿರುವುದಿಲ್ಲ. ಕೆಲವೇ ತಿಂಗಳ ಹಿಂದೆ ಬಹುಸಂಖ್ಯಾತ ಧರ್ಮಕ್ಕೆ ಸೇರಿದ ಕೆಲವು ಪ್ರತಿಗಾಮಿ ಶಕ್ತಿಗಳನ್ನು ತೃಪ್ತಿಪಡಿಸುವ ಉದ್ದೇಶದಿಂದ ಸಂಪೂರ್ಣ ಗೋಹತ್ಯಾ ನಿಷೇಧ

[ಕಡೆಯ ಪುಟ ನೋಡಿ]

ದುಡಿಯುವ ಜನಕ್ಕೆ ಕರ್ನಾಟಕ ಸರ್ಕಾರ ಸ್ವಾತಂತ್ರ್ಯದ ಉಡುಗೊರೆ

ಲಾಠಿ ಏಟು - ಅಶ್ರುವಾಯು - ಬಂಧನ

ರಾಜ್ಯ ಸರಕಾರವು ಮಾಡಿರುವ ಕಾರ್ಮಿಕ ಕಾಯಿದೆಗಳನ್ನು ಜಾರಿ ಮಾಡಿ ಎಂದು ಸರ್ಕಾರವನ್ನು ಒತ್ತಾಯಿಸಿ ಮೆರವಣಿಗೆಯಲ್ಲಿ ಹೋಗುತ್ತಿದ್ದ ಕಾರ್ಮಿಕರ ಮೇಲೆ ಪೋಲೀಸರು ಆಗಸ್ಟ್ 15 ರಂದು ಬೆಂಗಳೂರಿನಲ್ಲಿ ಲಾಠೀ ಚಾರ್ಜು ಮಾಡಿ ಅಶ್ರುವಾಯು ಸಿಡಿಸಿದರು.

ಪೋಲೀಸರ ಲಾಠಿ ಏಟಿನಿಂದ 10 ವರ್ಷದ ಬಾಲ ಕಾರ್ಮಿಕನೂ ಸೇರಿದಂತೆ 12 ಜನರಿಗೆ ಗಾಯಗಳಾಗಿವೆ.

ಆಗಸ್ಟ್ 15ರ ರ‍್ಯಾಲಿಗೆ ಪೂರ್ವಭಾವಿಯಾಗಿ ಸೇರಿದ್ದ ಹೋಟೆಲ್ ಕಾರ್ಮಿಕ ಸಮಾವೇಶವನ್ನು ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದ 15 ಕಾರ್ಮಿಕರನ್ನು ಉಪ್ಪಾರಪೇಟೆ ಪೋಲೀಸರು ವಿನಾಕಾರಣ ಬಂಧಿಸಿದರು.

ಕಾರ್ಮಿಕ ಕಾಯಿದೆಗಳ ಪ್ರಕಾರ 8 ಗಂಟೆ ಕೆಲಸ, ವಾರದ ರಜೆ, ರಾಷ್ಟ್ರೀಯ ಹಬ್ಬದ ರಜಾ ಸೌಲಭ್ಯ, ಇ.ಎಸ್.ಐ., ಪ್ರಾವಿಡೆಂಟ್ ಫಂಡ್, ಬೋನಸ್ ಮತ್ತು ಶೇ. 25 ರಷ್ಟು ವೇತನ ಹೆಚ್ಚಳ ಮುಂತಾದ ಸೌಲಭ್ಯಗಳ ಈಡೇರಿಕೆಗಾಗಿ ಹೋಟೆಲ್ ಕಾರ್ಮಿಕರು ಆಗಸ್ಟ್ 15 ರಂದು ಬೆಂಗಳೂರಿನಲ್ಲಿ ಬೃಹತ್ ರ‍್ಯಾಲಿಯೊಂದನ್ನು ಏರ್ಪಡಿಸಿದ್ದರು.

ಹೋಟೆಲ್ ಕಾರ್ಮಿಕ ಸಂಘಗಳ ಕ್ರಿಯಾಸಮಿತಿಯ ಆಶ್ರಯದಲ್ಲಿ ರ‍್ಯಾಲಿ ಹಾಗೂ 15ರ ಸಂಜೆ ಕಬ್ಬನ್ ಪಾರ್ಕಿನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು.

ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ನರಸಿಂಹರಾಜ ರಸ್ತೆಯ ಸಿಲ್ವರ್ ಜುಬ್ಲಿ ಪಾರ್ಕಿನಿಂದ ಹೊರಟ ಸುಮಾರು 5 ಸಾವಿರ ಕಾರ್ಮಿಕರು ನಗರದ ಮುಖ್ಯ ಬೀದಿಗಳನ್ನು ಹಾದು ಸಂಜೆ 6ರ ಸಮಯಕ್ಕೆ ಕಬ್ಬನ್‌ಪಾರ್ಕ್ ತಲುಪಿದರು.

ಕಾನೂನುಗಳೇ ಕಾರ್ಮಿಕರಿಗೆ ವಿರೋಧವಾಗಿವೆ :

ದೇಶದಲ್ಲಿ ಮಾಡಲಾಗಿರುವ ಬಹುಪಾಲು ಕಾನೂನುಗಳೇ ಕಾರ್ಮಿಕ ವರ್ಗಕ್ಕೆ ವಿರೋಧವಾಗಿವೆ ಎಂದು ಸಿ. ಐ. ಟಿ. ಯು. ರಾಜ್ಯ ಸಮಿತಿಯ ಕಾರ್ಯದರ್ಶಿ ವಿ. ಜಿ. ಕೆ. ನಾಯರ್ ಅವರು ಹೇಳಿದರು.

ಹೋಟೆಲ್ ಕಾರ್ಮಿಕರ ಬೃಹತ್ ರ‍್ಯಾಲಿಯೊಂದನ್ನು ಬೆಂಗಳೂರಿನಲ್ಲಿ ಇತ್ತೀಚೆಗೆ ಉದ್ದೇಶಿಸಿ ಮಾತನಾಡುತ್ತಿದ್ದ ನಾಯರ್ ಅವರು ಜಾರಿ ಮಾಡಲಾಗದ ಕಾನೂನುಗಳನ್ನೂ ಸರ್ಕಾರವು ಕೇವಲ ತೋರಿಕೆಗಾಗಿ ಮಾಡಿದೆಎಂದರು. ದೇಶದ ಕಾರ್ಮಿಕ ವರ್ಗದಲ್ಲೇ ಅತ್ಯಂತ ಬರ್ಬರ ಶೋಷಣೆಗೆ ಈಡಾಗಿರುವವರು ಹೋಟೆಲ್ ಉದ್ಯಮದ ಕಾರ್ಮಿಕರೆಂದು ಹೇಳಿದ ಸಿ.ಐ.ಟಿ.ಯು ಮುಖಂಡರು, ಶಾಸನಬದ್ಧವಾಗಿ ಸಿಕ್ಕಬೇಕಾದ 8 ಗಂಟೆಗಳ ಕೆಲಸ, ಇ. ಎಸ್. ಐ. ಸೌಲಭ್ಯ, ಪ್ರಾವಿಡೆಂಟ್ ಫಂಡ್, ಬೋನಸ್ ಮುಂತಾದ ಕನಿಷ್ಠ ಸೌಲಭ್ಯಗಳೂ ಹೋಟೆಲ್ ಉದ್ಯಮದಲ್ಲಿ ದುಡಿಯುವವರಿಗೆ ಸಿಕ್ಕುತ್ತಿಲ್ಲವೆಂದೂ, ಇದಕ್ಕೆ ಸರ್ಕಾರದ ಶಾಸನ ಜಾರಿ ಮಾಡದ ಕಾರ್ಮಿಕ ಅಧಿಕಾರಿಗಳೇ ನೇರ ಕಾರಣವೆಂದರು.

20ಕ್ಕಿಂತಲೂ ಹೆಚ್ಚಾಗಿ ಕೆಲಸಗಾರರನ್ನು ನೇಮಿಸಿಕೊಂಡಿರುವ ಹೋಟೆಲ್‌ಗಳು ಬೆಂಗಳೂರು ನಗರದಲ್ಲಿ 1000ಕ್ಕಿಂತಲೂ ಅಧಿಕವಾಗಿದ್ದು ಕೇವಲ 10 ಹೋಟೆಲ್‌ಗಳಲ್ಲೂ ಇ.ಎಸ್.ಐ., ಪ್ರಾವಿಡೆಂಟ್ ಫಂಡ್, ಬೋನಸ್ ಸೌಲಭ್ಯ ಇಲ್ಲವೆಂದು ಅಂಕಿ ಅಂಶಗಳ ಸಮೇತ ವಿವರಿಸಿದ ನಾಯರ್‌ರವರು ಇದಕ್ಕೆ ಕಾರ್ಮಿಕ ಇಲಾಖೆಯಲ್ಲಿನ ಅಧಿಕಾರಿಗಳೇ ಸಂಪೂರ್ಣ ಜವಾಬ್ದಾರರು ಎಂದರು. ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಲೇಬರ್ ಇನ್ಸ್‌ಪೆಕ್ಟರ್ ಅವರುಗಳನ್ನು ತೀವ್ರವಾಗಿ ಖಂಡಿಸಿದ ಕಾರ್ಮಿಕ ನಾಯಕರು, ಪೋಲೀಸರು ಹೋಟೆಲ್ ಮಾಲೀಕರುಗಳಿಗೆ ಬೆಂಬಲ ಕೊಡುವುದನ್ನು ನಿಲ್ಲಿಸಿದರೆ ಸಾಕು ಕಾರ್ಮಿಕರು ಹೋರಾಡಿ ತಮ್ಮ ನ್ಯಾಯ

[ಕಡೆಯ ಪುಟ ನೋಡಿ]

ಎ. ಐ. ಟಿ. ಯು. ಸಿ. ಮುಖಂಡ ಎಂ. ಸಿ. ನರಸಿಂಹನ್‌ಗೆ ಮುಖಭಂಗ

ಬಹುರಾಷ್ಟ್ರೀಯ ಸಂಸ್ಥೆಯಾದ ಮೈಕೋ ಆಡಳಿತ ವರ್ಗದವರು ಕಾರ್ಮಿಕರಿಗೆ ಶ್ರಮಭಾರ ಹೆಚ್ಚಿಸಿರುವುದರ ವಿರುದ್ಧ ಹಾಗೂ ಕೆಲವು ಹಕ್ಕುಗಳಿಗಾಗಿ ಮೈಕೋ ಕಾರ್ಮಿಕರು ಹೋರಾಟದ ಹಾದಿ ಹಿಡಿದಿದ್ದಾರೆ. ಇದೇ ಸಮಯದಲ್ಲಿ ಕಾರ್ಮಿಕರ ಗಮನವನ್ನು ಬೇರೆ ಕಡೆ ಸೆಳೆಯಲು, ಮಾಲೀಕರು ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಆಯ್ಕೆಯ ಕ್ರಮಬದ್ಧತೆಯನ್ನು ಪ್ರಶ್ನೆಮಾಡಿ, ಶ್ರೀ ಎಂ.ಸಿ. ನರಸಿಂಹನ್‌ರವರ ಮುಖಾಂತರ ಮುನ್ಸೀಫ್ ಕೋರ್ಟಿನಲ್ಲಿ ಕೇಸು ದಾಖಲು ಮಾಡಿದ್ದರು. ಸಂಘದ ಆಸ್ತಿಪಾಸ್ತಿಗೆ ನಷ್ಟ ಮಾಡಿರುವ, ಸಂಘದ ಪ್ರಧಾನ ಕಾರ್ಯದರ್ಶಿಯವರ ಮೇಲೆ ಕೈ ಮಾಡಿದ, ದುರ್ನಡತೆಯುಳ್ಳ ಶ್ರೀ ಶಂಕರಪ್ಪ ಎಂಬುವರನ್ನು ಸಂಘದ ಜನರಲ್ ಕೌನ್ಸಿಲ್ ಸ್ಥಾನದಿಂದ, ಬಹುಮತದ ಆಧಾರದ ಮೇಲೆ ರದ್ದು ಮಾಡಿರುವುದನ್ನು ನೆಪ ಮಾಡಿಕೊಂಡು ಮೇಲ್ಕಂಡ ಕೇಸನ್ನು ಹಾಕಿದ್ದಾರೆ. ವಿಷಯ ತಿಳಿದ ಕಾರ್ಮಿಕರು ವಿಚಾರಣೆ ನಡೆಯುವ ದಿನಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕೋರ್ಟಿನ ಬಳಿ ಸೇರಿ ಆಡಳಿತ ವರ್ಗ ಮತ್ತು ಅವರ ಏಜೆಂಟರ ವಿರುದ್ಧ ಘೋಷಣೆ ಕೂಗಿದರು. ನರಸಿಂಹನ್‌ರವರು ಅಪ್ರತ್ಯಕ್ಷವಾಗಿ ಮಾಲೀಕರಿಗೆ ಬೆಂಬಲ ನೀಡುತ್ತಿರುವುದಕ್ಕೆ ವಿಷಾದಿಸಿದರು.

ಸಂಘದ ಪರ ವಾದಿಸಿದ ವಕೀಲರು ಈ ವಿವಾದವನ್ನು ಪರಿಹರಿಸಲು ಮುನ್ಸೀಫ್ ಕೋರ್ಟಿಗೆ ವ್ಯಾಪ್ತಿಯಿಲ್ಲವೆಂದೂ, ಶ್ರೀ ಶಂಕರಪ್ಪನವರ ಮೇಲೆ ಅನೇಕ ಮೊಕದ್ದಮೆಗಳಿವೆಯೆಂದೂ, ಕುಡಿದು ಕಾರ್ಖಾನೆ ಗೇಟಿನ ಎದುರಿನಲ್ಲಿ ಅಸಭ್ಯವಾಗಿ ವರ್ತಿಸಿದ್ದಕ್ಕಾಗಿ ರೂ. 40/- ಜುಲ್ಮಾನೆ ಆಗಿದೆಯೆಂದೂ, ಸಂಘದ ಅಧ್ಯಕ್ಷರ ಚುನಾವಣೆ ಕ್ರಮಬದ್ಧವಾಗಿದೆಯೆಂದೂ, ಈ ಹಿಂದೆ ಶ್ರೀ ಎಂ.ಎಸ್. ಕೃಷ್ಣನ್ ಸಹಾ ಇದೇ ರೀತಿ ಆಯ್ಕೆ ಆಗಿದ್ದರೆಂದೂ ವಾದಿಸಿದರು.

ತಾರೀಕು 14-8-1979 ರಂದು ಮುನ್ಸೀಫ್ ನ್ಯಾಯಾಧೀಶರು ತೀರ್ಪಿತ್ತು ಮೊಕದ್ದಮೆಯನ್ನು ವಜಾ ಮಾಡಿದ್ದಾರೆ.

ಶ್ರೀ ನರಸಿಂಹನ್‌ರವರು, ಅರ್ಜಿಯಲ್ಲಿ ಕಾಂ. ಸೂರ್ಯನಾರಾಯಣರಾವ್‌ರವರು, ಸಂಘದಲ್ಲಿ ತನ್ನ ಪ್ರಭಾವ ಬೆಳೆಸಿಕೊಳ್ಳಲು ಕೆಲವರನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡು, ಸಂಘದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆಂದೂ, ಇದರಿಂದಾಗಿ ಕೆಲವು ಕಾರ್ಮಿಕರಲ್ಲಿ ಅಸಮಾಧಾನ ಮತ್ತು ಮಾಲೀಕ-ಕಾರ್ಮಿಕರ ಬಾಂಧವ್ಯ ಹದಗೆಡುತ್ತಿದೆಯೆಂದೂ ಆಪಾದಿಸಿದ್ದರು. ಇದರಿಂದ, ಎಂ. ಸಿ. ನರಸಿಂಹನ್‌ರವರು ಯಾರ ಪರ ವಕಾಲತ್ತು ವಹಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈಗ ಕೇಸು ವಜಾ ಆಗಿ ಅವರಿಗೆ ಮುಖಭಂಗವಾಗಿದೆ. ●

ಯುವಕ ಸಮಿತಿಯ ಬೆಂಬಲ

ಸರ್ವಾಧಿಕಾರಿ ಮತ್ತು ಜಾತೀಯವಾದಿ ಶಕ್ತಿಗಳನ್ನು ಸೋಲಿಸಲು, ಏಳು ರಾಷ್ಟ್ರೀಯ ವಿದ್ಯಾರ್ಥಿ ಯುವಜನ ಸಂಘಟನೆಗಳು ನವದೆಹಲಿಯಲ್ಲಿ ಜುಲೈ 21 ಮತ್ತು 22 ರಂದು ಸೇರಿದ್ದ ಸಮಾವೇಶದಲ್ಲಿ ತೆಗೆದುಕೊಂಡ ತೀರ್ಮಾನವನ್ನು, ದ. ಕ. ಜಿಲ್ಲಾ, ಕುಂದಾಪುರ ತಾಲ್ಲೂಕು ಯುವಕರ ಸಮಿತಿಯು ಸ್ವಾಗತಿಸಿದೆ. ತಾ. 12-8-79 ರಂದು ಸೇರಿದ ಸಭೆಯಲ್ಲಿ ಕೋಮುವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳನ್ನು ಪ್ರಚಾರ ಮತ್ತು ಐಕ್ಯಹೋರಾಟದ ಮೂಲಕ ಸೋಲಿಸಲು ತೀರ್ಮಾನಿಸಿದೆ. ○

ಸಿ.ಐ.ಟಿ.ಯು. ಕಚೇರಿಯ ಉದ್ಘಾಟನೆ

ದಾಂಡೇಲಿಯ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ವಾತಂತ್ರ್ಯ ದಿನಾಚರಣೆಯನ್ನು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರು ಹಾಗೂ ಪುರಸಭಾ ಅಧ್ಯಕ್ಷರಾದ ಕಾಂ. ಆರ್.ಜಿ. ಸ್ಥಳೇಕರ್‌ರವರ ನೇತೃತ್ವದಲ್ಲಿ ಪುರಸಭಾ ಭವನದಲ್ಲಿ ನಡೆಯಿತು.

ಅದೇ ದಿನ, ತಾ. 15-8-79 ರಂದು ಸಿ.ಐ.ಟಿ.ಯು. ಕಚೇರಿಯನ್ನು ದಾಂಡೇಲಿಯಲ್ಲಿ ಪ್ರಾರಂಭಿಸಲಾಯಿತು. ಉದ್ಘಾಟನೆಯನ್ನು ಕಾಂ. ಆರ್.ಜಿ. ಸ್ಥಳೇಕರ್ ನೆರವೇರಿಸಿದರು. ಕಚೇರಿಯು, ಬೃಂದಾವನ ಹೋಟೆಲ್ ಎದುರು ಬಾರ್ಚಿ ಕ್ರಾಸ್‌ನಲ್ಲಿದೆ. ●

ರಾಜ್ಯ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ

ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು, ದೇಶಾದ್ಯಂತ ಐಕ್ಯ ಹೋರಾಟಗಳನ್ನು ನಡೆಸುತ್ತಿದ್ದಾರೆ. ಕಲ್ಲಿದ್ದಲು ಗಣಿ ಕಾರ್ಮಿಕರು, ರಿಜರ್ವ್‌ಬ್ಯಾಂಕ್, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳ ನೌಕರರು ಯಶಸ್ವೀ ಹೋರಾಟ ನಡೆಸಿ, ಸಂಬಳ, ತುಟ್ಟಿಭತ್ಯೆ ಹಾಗೂ ಕೆಲವು ಸೌಲಭ್ಯಗಳಲ್ಲಿ ಹೆಚ್ಚಳ ಪಡೆದಿದ್ದರೂ ತಮ್ಮ ದೀರ್ಘ ಕಾಲದ ಹೋರಾಟಕ್ಕಾಗಿ ಮತ್ತೆ ಸಿದ್ಧತೆಗಳನ್ನು ನಡೆಸುತ್ತಿದ್ದಾರೆ. ಈಗ, ಹತ್ತಿಗಿರಣಿ ಕಾರ್ಮಿಕರು ಕಣಕ್ಕೆ ಇಳಿಯುತ್ತಿದ್ದಾರೆ. ಪ. ಬಂಗಾಳ, ಮಹಾರಾಷ್ಟ್ರ, ಗುಜರಾತ್ ಮತ್ತು ತಮಿಳುನಾಡು ಕಾರ್ಮಿಕರು ಐಕ್ಯತಾ ಹೋರಾಟದ ಫಲವಾಗಿ ಹೆಚ್ಚಿನ ಸಂಬಳ, ಸವಲತ್ತುಗಳನ್ನು ಪಡೆದುಕೊಂಡರು. ದೆಹಲಿ, ಆಂಧ್ರ, ರಾಜಸ್ಥಾನ, ಉತ್ತರಪ್ರದೇಶ ಮುಂತಾದ ರಾಜ್ಯಗಳಲ್ಲಿ ಐಕ್ಯತಾ ಹೋರಾಟಗಳು ನಡೆಯುತ್ತಿವೆ.

ಕೆಲವು ತಿಂಗಳ ಹಿಂದೆ ಬೆಂಗಳೂರಿನಲ್ಲಿ ಪ್ರಾರಂಭವಾದ ಹತ್ತಿಗಿರಣಿ ಕಾರ್ಮಿಕರ ಹೋರಾಟದ ಹಿನ್ನೆಲೆಯಲ್ಲಿ ಹಾಗೂ ತಮಿಳುನಾಡು ಕಾರ್ಮಿಕರು ಪಡೆದ ಜಯದ ಸ್ಫೂರ್ತಿಯಲ್ಲಿ ಕರ್ನಾಟಕದಲ್ಲಿಯೂ ಹತ್ತಿಗಿರಣಿ ಕಾರ್ಮಿಕರು ರಾಜ್ಯಮಟ್ಟದ ಹೋರಾಟಕ್ಕೆ ಸಿದ್ಧರಾಗುತ್ತಿದ್ದಾರೆ. ಈ ಹೋರಾಟಕ್ಕೆ ಪೂರ್ವಭಾವಿ ಸಿದ್ಧತೆಯಾಗಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳನ್ನು ಒಳಗೊಂಡು, ರಾಜ್ಯ ಹತ್ತಿಗಿರಣಿ ಕಾರ್ಮಿಕರ ಸಮ್ಮೇಳನ ಆಗಸ್ಟ್ 18 ಮತ್ತು 19 ರಂದು ದಾವಣಗೆರೆಯಲ್ಲಿ ನಡೆಯಲಿದೆ.

ಈ ಮಧ್ಯೆ ಸರಕಾರ ತ್ರಿಪಕ್ಷೀಯ ಸಭೆಯನ್ನು ಕರೆದಿದ್ದು, ಸಭೆ ಆಗಸ್ಟ್ 23 ಮತ್ತು 24 ರಂದು ನಡೆಯಲಿದೆ. ಐಕ್ಯತಾ ಹೋರಾಟಕ್ಕೆ ಐ. ಎನ್. ಟಿ. ಯು. ಸಿ. ಯನ್ನು ಸಹಾ ಸೇರಿಸಲು ಸಿ. ಐ. ಟಿ. ಯು. ಪ್ರಯತ್ನಿಸುತ್ತಿದೆ. ದಾವಣಗೆರೆ ಸಮ್ಮೇಳನಕ್ಕೆ ಸಿ. ಐ. ಟಿ. ಯು. ಪರವಾಗಿ ಕಾಂ. ಸೂರ್ಯನಾರಾಯಣರಾವ್ ಮತ್ತು ಕಾಂ. ವಿ. ಜೆ. ಕೆ. ನಾಯರ್ ಮುಂತಾದವರು ಭಾಗವಹಿಸುತ್ತಾರೆ. ●

ವಿದ್ಯಾರ್ಥಿ ಸಂಘಗಳ ಚುನಾವಣೆಯಲ್ಲಿ ಎಸ್. ಎಫ್. ಐ. ವಿಜಯ

ಇದುವರೆವಿಗೆ ಈ ಕೆಳಕಂಡ ಕಾಲೇಜು ಯೂನಿಯನ್‌ಗಳಲ್ಲಿ ಎಸ್.ಎಫ್.ಐ. ಅಭ್ಯರ್ಥಿಗಳು ಜಯಗಳಿಸಿರುವುದಾಗಿ ರಾಜ್ಯಸಮಿತಿಗೆ ವರದಿ ಬಂದಿದ್ದು ಈ ಬಗ್ಗೆ ಇನ್ನೂ ವರದಿಗಳು ಬರಲಿವೆ.

ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಪ್ಲಾನಿಂಗ್ ಫೋರಂ ಮತ್ತು ಲಿಟರರಿ ಕಾರ್ಯದರ್ಶಿ ಸ್ಥಾನಗಳನ್ನು ಪಡೆದಿದ್ದಾರೆ. ತರಗತಿ ಪ್ರತಿನಿಧಿಗಳ ಶೇ.40 ರಷ್ಟು ಸ್ಥಾನಗಳನ್ನೂ ಎಸ್.ಎಫ್.ಐ. ಅಭ್ಯರ್ಥಿಗಳು ಜಯಗಳಿಸಿದ್ದಾರೆ.

ತಿಪಟೂರಿನಲ್ಲಿ ಗೂಂಡಾಶಕ್ತಿಗಳಿಗೆ ವಿದ್ಯಾರ್ಥಿಗಳ ಉತ್ತರ: ಚುನಾವಣಾ ಪ್ರಚಾರದ ಸಮಯದಲ್ಲಿ ಕಾಲೇಜು ಆಡಳಿತ ವರ್ಗ ಮತ್ತು ಪ್ರಿನ್ಸಿಪಾಲರಿಂದ ಉತ್ತೇಜನ ಮತ್ತು ಪರೋಕ್ಷ ಬೆಂಬಲ ಪಡೆದ ಆರ್. ಎಸ್. ಎಸ್. ಮತ್ತು ವಿದ್ಯಾರ್ಥಿ ಪರಿಷತ್‌ನವರು ಎಸ್.ಎಫ್.ಐ. ಕಾರ್ಯಕರ್ತರ ಮತ್ತು ಅಭ್ಯರ್ಥಿಗಳ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಕೂಡದೆಂದು ಗೂಂಡಾಗಿರಿ ನಡೆಸಿದರು. ಈ ಎಲ್ಲ ಕುತಂತ್ರ ಮತ್ತು ಬೆದರಿಕೆಗಳಿಗೆ ಹೆದರದೆ ವಿದ್ಯಾರ್ಥಿಗಳು ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿ ಸ್ಥಾನಗಳಿಗೆ ಎಸ್.ಎಫ್.ಐ. ಅಭ್ಯರ್ಥಿಗಳನ್ನೇ ಚುನಾಯಿಸಿದ್ದಾರೆ. ತರಗತಿ ಪ್ರತಿನಿಧಿಗಳ ಸ್ಥಾನಗಳಲ್ಲೂ ಎಸ್.ಎಫ್.ಐ. ಬಹುಮತ ಪಡೆದಿದ್ದು ಇದು ತಿಪಟೂರಿನ ಗೂಂಡಾ ಶಕ್ತಿಗಳಿಗೆ ವಿದ್ಯಾರ್ಥಿಗಳು ನೀಡಿದ ಧೀಮಂತ ಉತ್ತರವಾಗಿದೆ.

ಎಸ್.ಎಫ್.ಐ. ವಿಜಯೋತ್ಸವ:

ತಿಪಟೂರು ಕಲ್ಪತರು ಕಾಲೇಜಿನ ವಿದ್ಯಾರ್ಥಿಸಂಘದ ಪದಾಧಿಕಾರಿಗಳ ಸ್ಥಾನಗಳಿಗೆ ಆಗಸ್ಟ್ 6 ರಂದು ಚುನಾವಣೆ ನಡೆದು ಎಸ್. ಎಫ್. ಐ. ತಾನು ಸ್ಪರ್ಧಿಸಿದ್ದ ಪ್ರಧಾನ ಕಾರ್ಯದರ್ಶಿ ಮತ್ತು ಸಹಕಾರ್ಯದರ್ಶಿ ಸ್ಥಾನಗಳಿಗೆ ಜಯಗಳಿಸಿದ್ದು 43 ತರಗತಿ ಪ್ರತಿನಿಧಿಗಳಲ್ಲಿ 24 ಸ್ಥಾನಗಳನ್ನು ಪಡೆದು ಇಡೀ ತಾಲ್ಲೂಕಿನ ಗಮನ ಸೆಳೆದಿದ್ದು ಈ ಚುನಾವಣೆಯಲ್ಲಿ ವಿಜಯ ಪಡೆದಿದೆ. ಚುನಾವಣೆಯ ಸಮಯದಲ್ಲಿ ವಿದ್ಯಾರ್ಥಿ ಪರಿಷತ್ ನಡೆಸಿದ ಗೂಂಡಾಗಿರಿಗೆ ಈ ವಿಜಯದ ಮೂಲಕ ವಿದ್ಯಾರ್ಥಿಗಳು ಸರಿಯಾದ ಉತ್ತರ ನೀಡಿದ್ದಾರೆ.

ದಿನಾಂಕ 7-8-79 ರಂದು ಒಂದು ಸಾವಿರ ಎಸ್. ಎಫ್. ಐ. ಬೆಂಬಲಿಗರು ಮೆರವಣಿಗೆ ನಡೆಸಿ ಬಹಿರಂಗ ಸಭೆಯನ್ನು ನಡೆಸಿದರು. ಈ ಸಭೆಯಲ್ಲಿ ಮಾತನಾಡುತ್ತಾ ಕಾಂ. ಆರ್. ಎಸ್. ಚೆನ್ನಬಸವಣ್ಣನವರು ವಿದ್ಯಾರ್ಥಿಗಳು ಒಗ್ಗಟ್ಟಾಗಿ ಸಮಾಜಘಾತುಕ ಶಕ್ತಿಗಳ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು. ○

ಸರಕಾರದ ಕ್ರಮಕ್ಕೆ ಎಸ್.ಎಫ್.ಐ. ಆಕ್ಷೇಪ

ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿಯನ್ನು ರದ್ದುಮಾಡಿ ಹೊರಡಿಸಿರುವ ಸರಕಾರದ ಆಜ್ಞೆಯನ್ನು ದಕ್ಷಿಣ ಕನ್ನಡ ಜಿಲ್ಲಾ ಎಸ್. ಎಫ್. ಐ. ತೀವ್ರವಾಗಿ ಖಂಡಿಸಿದೆ. ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಹಿತಾಸಕ್ತಿಗೆ ವಿರುದ್ಧವಾಗಿರುವ ಈ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ. ಸರಕಾರದ ಕ್ರಮವನ್ನು ವಿರೋಧಿಸಿ ತಾ. 9-8-79 ರಂದು ನಡೆದ ವಿದ್ಯಾರ್ಥಿಗಳ ಬೃಹತ್ ಸಭೆಯಲ್ಲಿ ಎಸ್. ಎಫ್. ಐ. ಸಕ್ರಿಯವಾಗಿ ಭಾಗವಹಿಸಿತ್ತು.

ಪ್ರತಿವರ್ಷ 'ಜಾತಿ ಮತ್ತು ಆದಾಯ ಸರ್ಟಿಫಿಕೇಟ್'ನ್ನು ಪಡೆಯುವ ಪದ್ಧತಿಯನ್ನು ರದ್ದುಪಡಿಸಿ, ಒಂದು ಸಾರಿ ಮಾತ್ರ ಸರ್ಟಿಫಿಕೇಟನ್ನು ಪಡೆಯಬೇಕು ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಇರುವ ವಾರ್ಷಿಕ ಆದಾಯದ ಗರಿಷ್ಠ ಮಿತಿಯನ್ನು ಈಗಿನ ರೂ. 3600 ರಿಂದ ರೂ. 8000 ಕ್ಕೆ ಏರಿಸಬೇಕೆಂದು ಒತ್ತಾಯಿಸಿದೆ. 1977-78, 1978-79ರ ಸಾಲಿನ ಫ್ರೀಷಿಪ್ಪನ್ನು ವಿದ್ಯಾರ್ಥಿಗಳಿಗೆ ನೀಡದಿರುವುದನ್ನು ಆಕ್ಷೇಪಿಸಿ, ಈ ಕೂಡಲೇ ಅದನ್ನು ಮರಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಿದೆ. ಹಾಗೆಯೇ, ಪಿಂಚಣಿದಾರರ ಮಕ್ಕಳಿಗೆ ಫೀ ರಿಯಾಯಿತಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿರುವುದನ್ನು ಪ್ರತಿಭಟಿಸಿ, ಕೂಡಲೇ ಪಿಂಚಣಿದಾರರ ಮಕ್ಕಳಿಗೆ ರಿಯಾಯಿತಿ ಸೌಲಭ್ಯ ನೀಡಬೇಕೆಂದು ಒತ್ತಾಯಿಸಿದೆ. ○

ಹಲ್ಲೆಯ ಖಂಡನೆ

ತಾರೀಖು 31-7-79 ರಂದು ಕಾಂ. ಚೆನ್ನಬಸವಣ್ಣ ಮತ್ತು ಇತರ ಸಂಗಾತಿಗಳ ಮೇಲೆ ನಡೆದಿರುವ ಗೂಂಡಾದಾಳಿಯನ್ನು ದ. ಕ. ಜಿಲ್ಲಾ ಕುಂದಾಪುರ ಎಸ್.ಎಫ್.ಐ. ಘಟಕ ಖಂಡಿಸಿದೆ. ಈ ಬಗ್ಗೆ ಕೂಡಲೇ ತನಿಖೆಯಾಗಿ, ದುಷ್ಕರ್ಮಿಗಳ ಮೇಲೆ ಕ್ರಮ ತೆಗೆದುಕೊಳ್ಳಲು, ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕೆಂದು ಒತ್ತಾಯಿಸಿದೆ.

ಎಸ್. ಎಫ್. ಐ. ಮುಖಂಡ ಕಾಂ. ಚೆನ್ನಬಸವಣ್ಣನವರ ಮೇಲೆ ಆರೆಸ್ಸೆಸ್, ವಿದ್ಯಾರ್ಥಿ ಪರಿಷತ್ ಗೂಂಡಾಗಳು ತಾ. 31-7-79 ರಂದು ತಿಪಟೂರಿನಲ್ಲಿ ನಡೆಸಿದ ಅಮಾನುಷ ಹಲ್ಲೆಯನ್ನು "ಹಟ್ಟಿ ಚಿನ್ನದಗಣಿ ಶಾಖೆ ಎಸ್. ಎಫ್. ಐ." ಖಂಡಿಸಿದೆ. ಇಂಥಾ ಗೂಂಡಾಗಳ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳದಿದ್ದಲ್ಲಿ, ಹೋರಾಟವೊಂದೇ ದಾರಿ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದೆ. ●

ಒಂದು ಅಪೂರ್ಣ ಕ್ರಾಂತಿಯ ಕಥೆ

ಭಾರತ ಸ್ವತಂತ್ರವಾಗಿ ಈ ಆಗಸ್ಟ್ 15ಕ್ಕೆ 32 ವರ್ಷಗಳು ಕಳೆದುವು ಎಂದು ಹೇಳಲಾಗುತ್ತದೆ. ಆದರೆ ಇಂದು ಭಾರತ ಒಂದು ನಿಜವಾದ ಸ್ವತಂತ್ರ ರಾಷ್ಟ್ರವೇ ಎಂದು ಕೇಳಬೇಕಾದ ಪರಿಸ್ಥಿತಿ ಇದೆ.

1947ರ ಅಧಿಕಾರ ಹಸ್ತಾಂತರದಿಂದೀಚೆಗೆ ಭಾರತದ ರಾಷ್ಟ್ರೀಯ ಸಮಸ್ಯೆ ಪರಿಹಾರವಾಗಿಲ್ಲ ಮಾತ್ರವಲ್ಲ ಉಲ್ಬಣಗೊಂಡಿದೆ ಎಂಬುದು ಹೀಗೆ ಹೇಳಲು ಕಾರಣ. ಅಧಿಕಾರ ಹಸ್ತಾಂತರದ ರೀತಿಯಿಂದಲೇ ಈ ರೀತಿ ಆಗಿದೆ ಎಂದು ಹೇಳಬಹುದು. ರಾಷ್ಟ್ರೀಯ ಹೋರಾಟದಲ್ಲಿ ಪ್ರಾಣತೆತ್ತ ಹಲವು ಹುತಾತ್ಮರ ಕನಸಿನಂತೆ ಎಲ್ಲಾ ಧರ್ಮಗಳ, ಭಾಷೆಗಳ, ಜಾತಿಗಳ ಜನರ ರಾಷ್ಟ್ರವಾಗುವ ಬದಲು ದೇಶ ಧಾರ್ಮಿಕ ಆಧಾರದ ಮೇಲೆ ವಿಭಜಿತವಾಯಿತು. ಪರಸ್ಪರ ಯಾವುದೇ ವಿರುದ್ಧ ಹಿತಾಸಕ್ತಿಗಳಿಲ್ಲದ ಹಿಂದೂ-ಮುಸ್ಲಿಂ ಸೋದರರು ಒಬ್ಬರ ಮೇಲೊಬ್ಬರು ಅತ್ಯಂತ ದೊಡ್ಡ ಪ್ರಮಾಣದ, ಅಮಾನವೀಯ ಅತ್ಯಾಚಾರ, ಹಿಂಸಾಚಾರಗಳನ್ನು ನಡೆಸಿದರು. ವಿಭಜನೆಯಾದ ಮೇಲೂ ಪಾಕಿಸ್ತಾನದಲ್ಲೂ ಭಾರತದಲ್ಲೂ ಹಿಂದೂ-ಮುಸ್ಲಿಂ ಐಕ್ಯತೆ ಸಮಸ್ಯೆ ಪರಿಹಾರವಾಗಿಲ್ಲ. ಮತೀಯ ದಂಗೆಗಳು ಹೆಚ್ಚುತ್ತಿವೆ. ವಿಭಜಿತ ಭಾರತದಲ್ಲಿ ಹಿಂದೂ-ಮುಸ್ಲಿಂ ಸಮಸ್ಯೆ ಮಾತ್ರವಲ್ಲದೆ, ಅಸ್ಸಾಂನಲ್ಲಿ ನಡೆದ ಭಾಷಾ ದಂಗೆಗಳು, ತಮಿಳುನಾಡಿನಲ್ಲಿ ನಡೆದ ಹಿಂದಿ ವಿರೋಧಿ ಚಳುವಳಿ, ತೆಲಂಗಾಣ, ವಿದರ್ಭ, ಜಾರ್ಖಂಡ ಮುಂತಾದ ಪ್ರತ್ಯೇಕತಾ ಚಳುವಳಿ, ಬಿಹಾರದಲ್ಲಿ ಆಸ್ಫೋಟಿಸಿದ ರಿಸರ್ವೇಷನ್‌ಗೆ ಸಂಬಂಧಿಸಿದ ಜಾತಿಗಲಭೆಗಳು, ದಿನನಿತ್ಯ ಹರಿಜನ, ಗಿರಿಜನ, ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರ, ಇವು ತಲೆ ಎತ್ತಿವೆ ಅಥವಾ ಮುಂದುವರಿಯುತ್ತಿವೆ. ಇಷ್ಟೇ ಅಲ್ಲ ಭಾರತ ಆರ್ಥಿಕವಾಗಿ, ರಾಜಕೀಯವಾಗಿ ವಿದೇಶಿ ಶಕ್ತಿಗಳಿಂದ ಪೂರ್ತಿ ಸ್ವತಂತ್ರವಾಗಿಲ್ಲ. ಹಲವು ಬ್ರಿಟಿಷ್, ಅಮೆರಿಕಾ, ಪ. ಜರ್ಮನಿ ಮುಂತಾದ ಸಾಮ್ರಾಜ್ಯಶಾಹಿ ದೇಶಗಳ ಬಹುರಾಷ್ಟ್ರೀಯ ಕಂಪನಿಗಳ ಬಲವಾದ ಹಿಡಿತದಲ್ಲಿ ಭಾರತದ ಆರ್ಥಿಕತೆ ಇದೆ. ಭಾರತ ತನ್ನ ಪಂಚವಾರ್ಷಿಕ ಯೋಜನೆಗಳಿಗೆ ಸಹ ದೊಡ್ಡ ಪ್ರಮಾಣದಲ್ಲಿ ವಿದೇಶಿ-ಧನ ಮತ್ತು ಇತರ ಸಹಾಯಗಳಿಗೆ ನಂಬಿಕೊಂಡಿದೆ. ಹೀಗೆ ರಾಷ್ಟ್ರೀಯ ಸಮಸ್ಯೆಯ ಆಂತರಿಕ ಮತ್ತು ಬಾಹ್ಯ ಇವೆರಡೂ ವಿಷಯಗಳು ಬಗೆಹರಿದಿಲ್ಲ.

ಸುಮಾರು ನೂರು ವರ್ಷಗಳ ಕಾಲ ನಡೆದ ನಮ್ಮ ರಾಷ್ಟ್ರೀಯ ಚಳುವಳಿ ಏಕೆ ಇದನ್ನು ಪರಿಹರಿಸಲಿಲ್ಲ? ಎಂಬ ಪ್ರಶ್ನೆ ಈಗ ಏಳುತ್ತದೆ. ಇದನ್ನು ಉತ್ತರಿಸಲು, ನಮ್ಮ ರಾಷ್ಟ್ರೀಯ ಸಮಸ್ಯೆಯ ಚಾರಿತ್ರಿಕ ಮೂಲ ತಿಳಿಯಲು ಮತ್ತು ಈಗ ಅದನ್ನು ಪರಿಹರಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮ ರೂಪಿಸಲು, ರಾಷ್ಟ್ರೀಯ ಚಳುವಳಿಯಲ್ಲಿ ವಿವಿಧ ವರ್ಗಗಳ ಪಾತ್ರ-ಚಳುವಳಿಯಲ್ಲಿ ಭಾಗವಹಿಸುವಲ್ಲಿ ಅವುಗಳ ಉದ್ದೇಶ, ಮತ್ತು ಅದಕ್ಕಾಗಿ ಅವು ರೂಪಿಸಿದ ಚಳುವಳಿಯ ರೂಪಗಳು ಇದರ ಸ್ಥೂಲ ಪರಿಚಯ ಅಗತ್ಯ.

ನಮ್ಮ ರಾಷ್ಟ್ರೀಯ ಚಳುವಳಿ ಆರಂಭವಾದದ್ದು 1857ರ ಪ್ರಥಮ ಸ್ವಾತಂತ್ರ್ಯ ಸಮರದಿಂದ. ಇದರ ನಾಯಕತ್ವವಹಿಸಿದ್ದು ರಾಜ್ಯ ಕಳೆದುಕೊಂಡ ರಾಜರು. ಜಮೀನುದಾರರು ಮತ್ತು ಜಾತಿ ಮತ್ತು ಧಾರ್ಮಿಕ ನಾಯಕರು. ಇದರ ಪಾಳೆಯಗಾರಿ ನಾಯಕತ್ವದಿಂದ ಇದು ವಿಫಲವಾದರೂ, ವಿದೇಶಿ ಶಕ್ತಿಗಳ ವಿರುದ್ಧ ಹೋರಾಟದ ಮನೋಭಾವ ಹಾಗೆ ಉಳಿಯಿತು. ಈ ಸ್ವಾತಂತ್ರ್ಯ ಸಮರದಿಂದ ಆದ ಇನ್ನೊಂದು ಪ್ರಮುಖ ಬದಲಾವಣೆ ಎಂದರೆ ಭಾರತ ನೇರವಾಗಿ ಬ್ರಿಟಿಷ್ ಸರ್ಕಾರದಿಂದ ನೇಮಕವಾದ ವೈಸ್‌ರಾಯ್ ಆಡಳಿತಕ್ಕೊಳಪಟ್ಟದ್ದು.

19ನೇ ಶತಮಾನದ ಕೊನೆಯ ಹೊತ್ತಿಗೆ ಮೂರು ಹೊಸ ವರ್ಗಗಳು ಭಾರತದ ಚರಿತ್ರೆಯಲ್ಲಿ ಮೊದಲ ಬಾರಿಗೆ ಹುಟ್ಟಿಕೊಂಡವು. ಅವು-ಹತ್ತಿಗಿರಣಿಗಳನ್ನು ಸ್ಥಾಪಿಸಿದ ಸ್ಥಳೀಯ ಬಂಡವಾಳಶಾಹಿ ವರ್ಗ, ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕವರ್ಗ ಮತ್ತು ಉಚ್ಚ ಇಂಗ್ಲೀಷ್ ಶಿಕ್ಷಣ ಪಡೆದ ಬುದ್ಧಿಜೀವಿಗಳ ಮಧ್ಯಮವರ್ಗ. ಬ್ರಿಟಿಷರ ವಸಾಹತುಶಾಹಿ ದಬ್ಬಾಳಿಕೆ ಮತ್ತು ವರ್ಣಭೇದ ನೀತಿಯಿಂದ ರೈತರಲ್ಲಿ ಮಾತ್ರವಲ್ಲದೆ ಈ ಮೂರು ವರ್ಗಗಳಲ್ಲೂ ಅತೃಪ್ತಿ ಹುಟ್ಟಿತು. ಈ ಅತೃಪ್ತಿ. ಆದರಲ್ಲೂ ಮಧ್ಯಮ ವರ್ಗದ ಬುದ್ಧಿಜೀವಿಗಳಲ್ಲಿನ ಅತೃಪ್ತಿ ಬ್ರಿಟಿಷ್ ವಿರೋಧಿ ಗುಪ್ತಸಂಘ ಸಂಘಟನೆಗಳನ್ನು ಕಟ್ಟುವಲ್ಲಿಯವರೆಗೆ ಹೋಯಿತು. ಕೆಲವು ಕಡೆ ಇಂತಹ ಸಂಘಟನೆಗಳು ಸಾಮಾನ್ಯ ಜನತೆ ಅದರಲ್ಲೂರೈತರಜತೆ ಸಂಪರ್ಕ ಸಾಧಿಸಿ ರಾಜಕೀಯ ಚಟುವಟಿಕೆ ಆರಂಭಿಸಿದವು. ಇದರಿಂದ ಭೀತರಾದ ಕೆಲವು I. C. S. ಅಧಿಕಾರಿಗಳು ಬುದ್ಧಿಜೀವಿಗಳನ್ನು ಸಾಮಾನ್ಯ ಜನತೆಯಿಂದ ಪ್ರತ್ಯೇಕಿಸುವುದರ ಅಗತ್ಯವನ್ನು ಮನಗಂಡರು. ಅಲನ್ ಅಕ್ಟೇವಿಯನ್ ಹ್ಯೂಮ್ ಒಬ್ಬ ಚಾಣಾಕ್ಷ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ನಮ್ರ ಹಾಗೂ ವಿಧೇಯ ಸೇವಕ. ಅವನು ಎಲ್ಲಾ ಬುದ್ಧಿಜೀವಿಗಳ ರಾಷ್ಟ್ರೀಯ ಸಮಾವೇಶ ಕರೆದು ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಎಂಬ ಸಂಸ್ಥೆ ಸ್ಥಾಪಿಸಿದ. ಈ ಸಮ್ಮೇಳನದಲ್ಲಿ ಉಚ್ಚ ಶಿಕ್ಷಣ ಪಡೆದ ಭಾರತೀಯರಿಗೆ ಸರಕಾರಿ ಹುದ್ದೆಗಳನ್ನು ಕೊಡಬೇಕೆಂದು ಕೆಲವು ಆಡಳಿತ ಸುಧಾರಣೆಗಳನ್ನು ಮಾಡಬೇಕೆಂದು ಬ್ರಿಟಿಷ್ ಸರಕಾರವನ್ನು ವಿನಯದಿಂದ ಕೇಳಿಕೊಳ್ಳಲಾಯಿತು. ಇದೇ ಸಮ್ಮೇಳನದಲ್ಲಿ ವಿಕ್ಟೋರಿಯಾ ರಾಣಿಗೆ ಜಯಕಾರ ಹಾಕಿ ತಾನು ರಾಣಿಯ ಶೂ-ಲೇಸ್ ಕಟ್ಟಲು ಸಹ ತಕ್ಕವನಲ್ಲವೆಂಬ ಬಹ್ಯೂಮನ ಮಾತಿಗೆ ಸಹ ಬಂದ ಪ್ರತಿನಿಧಿಗಳು ತಲೆದೂಗಿದರು.

ಹೀಗೆ ಭಾರತದಲ್ಲಿ ಕ್ರಾಂತಿಯನ್ನು ತಡೆಗಟ್ಟಲು, ಬ್ರಿಟಿಷರ ಹಿತಾಸಕ್ತಿ ಕಾಪಾಡಲು, ಕಾಂಗ್ರೆಸ್ ಒಬ್ಬ ಬ್ರಿಟಿಷನಿಂದಾಗಿ ಜನ್ಮ ತಳೆಯಿತು. ಮುಂದಿನ ಸುಮಾರು 20 ವರ್ಷಗಳು ಅದರ ತಂದೆ ಹಾಕಿಕೊಟ್ಟ ಹಾದಿಯಲ್ಲೇ ಅದು ತೆರಳಿತು. ಇಷ್ಟು ಹೊತ್ತಿಗೆ ಭಾರತೀಯ ಬಂಡವಾಳಶಾಹಿ ವರ್ಗದ ಮೇಲಿನ ಸ್ತರದವರ ಹಿತಾಸಕ್ತಿ ರಕ್ಷಿಸುವ ಸಂಘಟನೆಯಾಗಿ ಮಾರ್ಪಟ್ಟಿತ್ತು. ಅದರ ನಾಯಕರು ಬುದ್ಧಿಜೀವಿ ಮಧ್ಯಮವರ್ಗದಿಂದ ಬರುತ್ತಿದ್ದರು. ಸವಿನಯ ನಿರ್ಣಯಗಳು ಯಾವುದೇ ಫಲಕೊಡದ್ದರಿಂದ ಕಾಂಗ್ರೆಸ್‌ನೊಳಗೆ ಒಂದು ತೀವ್ರ ರಾಷ್ಟ್ರೀಯವಾದಿ ಗುಂಪು ಹುಟ್ಟಿಕೊಂಡಿತು. 1905ರಲ್ಲಿ ಲಾರ್ಡ್ ಕರ್ಝನ್ ರಾಜಕೀಯ ಚಳುವಳಿಯ ಕೇಂದ್ರವಾಗಿದ್ದ ಬಂಗಾಳವನ್ನು ವಿಭಜಿಸಲು (ಆ ಮೂಲಕ ಚಳುವಳಿಯನ್ನು ಬಲಹೀನಗೊಳಿಸಲು) ನಿರ್ಧರಿಸಿದ. ಇದಕ್ಕೆ ಬಲವಾದ ವಿರೋಧ, ಪ್ರತಿಭಟನೆ ಕಾಣಿಸಿಕೊಂಡಿತು. ಕಾಂಗ್ರೆಸ್ 'ಸ್ವದೇಶಿ' ಚಳುವಳಿಗೆ ಕರೆ ನೀಡಿತು. ಮೊದಲ ಬಾರಿಗೆ ಸಾಮೂಹಿಕ ಚಳುವಳಿಯಲ್ಲಿ ಕಾಂಗ್ರೆಸ್ ಧುಮುಕಿತು. ಆದರೆ 'ಸ್ವದೇಶಿ' ಚಳುವಳಿ, ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ವಸ್ತುಗಳ ಬಳಕೆ, ಬಂಡವಾಳಶಾಹಿವರ್ಗಕ್ಕೆ ಅನುಕೂಲಕರ ಎಂಬುದು ಗಮನಾರ್ಹ ಬ್ರಿಟಿಷರು ದಮನ ಶುರುಮಾಡಿದರು. ತಿಲಕರ ಬಂಧನದ ವಿರುದ್ಧ ಮುಂಬಯಿಯ ಆಗತಾನೇ ಸಂಘಟಿತವಾಗಿದ್ದ ಕಾರ್ಮಿಕವರ್ಗ ಮುಷ್ಕರ ಹೂಡಿತು. ಚಳುವಳಿಯ ಪ್ರಖರತೆಯಿಂದ ಬಂಗಾಳದ ವಿಭಜನೆ 1911 ರಲ್ಲಿ ಹಿಂತೆಗೆದುಕೊಳ್ಳಬೇಕಾಯಿತು.

ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಸಾಮ್ರಾಜ್ಯಶಾಹಿ ಯುದ್ಧಕ್ಕೆ ಕಾಂಗ್ರೆಸ್ ನಾಯಕರು ಪೂರ್ಣಪ್ರಮಾಣದ ಸಹಾಯ ನೀಡಿದರು. ಗಾಂಧಿಯಿಂದ ಹಿಡಿದು ತಿಲಕರವರೆಗೆ ಎಲ್ಲರೂ ತಮ್ಮ ರಾಜಭಕ್ತಿ ಪ್ರದರ್ಶಿಸಿದರು. ಇದಕ್ಕೆ ಬಕ್ಷಿಸ್ ರೂಪದಲ್ಲಿ ಭಾರತಕ್ಕೆ ಡೊಮಿನಿಯನ್ ದರ್ಜೆ ಕೊಡಬಹುದೆಂದು ಆಶಿಸಿದ್ದರು. ಆದರೆ ಅದರ ಬದಲು ಕಾರಣವಿಲ್ಲದೆ ಬಂಧಿಸಲು ಅನುಮಾಡಿಕೊಡುವ ರೌಲತ್ ಕಾನೂನು ಬಂತು. ಇದರ ವಿರುದ್ಧ ಕಾರ್ಮಿಕರು ಮುಷ್ಕರ ಹೂಡಿದರು. ರೈತರು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನಾ ಚಳುವಳಿಗೆ ಸೇರಿಕೊಂಡರು. ಇದು 1917ರ ರಷ್ಯನ್ ಕ್ರಾಂತಿಯ ನಂತರ ಪ್ರಪಂಚದಾದ್ಯಂತ ಕಂಡುಬಂದ ಕ್ರಾಂತಿಕಾರಿ ಚಳುವಳಿಯ ಭಾಗವಾಗಿತ್ತು. ಜಾಲಿಯನ್‌ವಾಲಾಬಾಗ್ ಹತ್ಯಾಕಾಂಡ, ಇದಕ್ಕೆ ಬ್ರಿಟಿಷರ ಉತ್ತರವಾಗಿತ್ತು. ಬ್ರಿಟಿಷರು ಮಾಡಿದ ದಮನಕ್ಕೆ ರೊಚ್ಚಿಗೆದ್ದ ಜನತೆ ಭಾರಿ ಪ್ರತೀಕಾರ ಮಾಡಿತು. ಕಾಂಗ್ರೆಸ್ ಅಸಹಕಾರ ಚಳುವಳಿಗೆ ಕರೆಕೊಟ್ಟಿತು-ಕೋರ್ಟು, ಕಚೇರಿ, ಶಾಲೆ, ಕಾಲೇಜು, ವಿಧಾನಸಭೆಗಳಿಗೆ ಬಹಿಷ್ಕಾರ ಈ ಕಾರ್ಯಕ್ರಮ ಮಧ್ಯಮವರ್ಗಕ್ಕೆ ಉದ್ದೇಶವಾಗಿತ್ತು. ರೈತಕಾರ್ಮಿಕರಿಗೆ ಚರಕ ಸುತ್ತುವುದು ಬಿಟ್ಟರೆ ಈ ಚಳುವಳಿಯಲ್ಲಿ ಯಾವುದೇ ವಿಶೇಷ ಪಾತ್ರವಿರಲಿಲ್ಲ. ಆದರೂ ಅಸಹಕಾರ ಚಳುವಳಿ ಜೋರಾಗಿ ನಡೆಯಿತು. 1921 ರಲ್ಲಿ ಕಾಂಗ್ರೆಸ್ ತಾನು ಕಾನೂನುಬದ್ಧ ಮತ್ತು ಶಾಂತಿಯುತ ಕ್ರಮಗಳಿಂದ ಸ್ವರಾಜ್ಯ ಗಳಿಸುವುದಾಗಿ ಘೋಷಿಸಿತು. ಜನತೆ ದೊಡ್ಡ ಪ್ರಮಾಣದ ದೀರ್ಘಕಾಲೀನ ಚಳುವಳಿಗೆ ಮಾನಸಿಕವಾಗಿ ಸಿದ್ಧವಾಗಿದ್ದರೆ,ಗಾಂಧೀಜಿ ಬಾರ್ಡೋಲಿ ಜಿಲ್ಲೆ (ಗುಜರಾತು)ಯಲ್ಲಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲು ಚಳುವಳಿಗೆ ಮಾತ್ರ ಕರೆ ನೀಡಿ, ಜನರ ಉತ್ಸಾಹಕ್ಕೆ ತಣ್ಣೀರೆರಚಿದರು. ಆದರೂ ಹಲವು ಕಡೆ ಜನತೆ ಅಸಹಕಾರ ಚಳುವಳಿ, ಕರ ನಿರಾಕರಣೆ ಚಳುವಳಿ ಮುಂದುವರಿಸಿದರು. ಉತ್ತರ ಪ್ರದೇಶದ ಚೌರಿಚೌರಾ ಎಂಬಲ್ಲಿ ಪೋಲೀಸರ ದಮನಕ್ಕೆ ಪ್ರತೀಕಾರವಾಗಿ ಸ್ಟೇಶನಿಗೆ ಬೆಂಕಿ ಕೊಟ್ಟರು. ಕರನಿರಾಕರಣೆ ಚಳುವಳಿ ವ್ಯಾಪಕವಾಗುವ ಸಂಭವವಿತ್ತು. ಆಗಲೇ ಗಾಂಧೀಜಿ ಚೌರಿಚೌರಾದ ಘಟನೆಯನ್ನು ಖಂಡಿಸಿ ತಮ್ಮ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಂಡರು. ಮತ್ತು ರಾಜಕೀಯದಿಂದ ದೂರವಾದರು. ಈ ಸಮಯದಲ್ಲಿ ಜನತಾಚಳುವಳಿತಾರಕಕ್ಕೇರಿತ್ತು. ಸ್ವಲ್ಪ ಸಮಯ ಕಾಂಗ್ರೆಸ್‌ನ ನಾಯಕತ್ವವಿಲ್ಲದೆಯೇ ಚಳುವಳಿ ಮುಂದುವರಿದು ನಂತರ ಸ್ತಬ್ಧವಾಯಿತು. ಹೀಗೆ ಸ್ವಾತಂತ್ರ್ಯಕ್ಕಿಂತ ಹೆಚ್ಚಾಗಿ ಜಮೀನುದಾರ, ಬಂಡವಾಳಶಾಹಿಗಳ ಹಿತರಕ್ಷಿಸುವುದರಲ್ಲಿ ಆಸಕ್ತವಾಗಿದ್ದ ಕಾಂಗ್ರೆಸ್‌ನ ನಾಯಕತ್ವದಿಂದ ಅಕ್ಟೋಬರ್ ಕ್ರಾಂತಿಯಿಂದ ಎದ್ದ ಕ್ರಾಂತಿಕಾರಿ ಅಲೆ ಭಾರತದಲ್ಲಿ ಹಿಂಜರಿಯಿತು.

1922-28ರ ವರೆಗಿನ ಅವಧಿಯಲ್ಲಿ ಕಾಂಗ್ರೆಸ್ ನಿಷ್ಕ್ರಿಯತೆಯಿಂದ ನಿರಾಶದಾಯಕ ರಾಜಕೀಯ ವಾತಾವರಣವಿತ್ತು. ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ನಾಯಕತ್ವದಲ್ಲಿ ಕಾರ್ಮಿಕವರ್ಗದ ರಾಜಕೀಯ ಚಟುವಟಿಕೆಗಳಿಂದ ರಾಷ್ಟ್ರೀಯ ಚಳುವಳಿಗೆ ಹೊಸ ಜೀವ ಬಂತು.

1921 ರಲ್ಲಿ ಸ್ವರಾಜ್ಯಗಳಿಸುವುದಾಗಿ ಘೋಷಿಸಿದ ಕಾಂಗ್ರೆಸ್ 1928 ರಲ್ಲಿ ಸರ್ವಪಕ್ಷಗಳ ಒಂದು ಸಭೆ ಕರೆದು, ಅದರ ಆದೇಶದ ಮೇರೆಗೆ ಮೋತಿಲಾಲ್ ನೆಹ್ರೂ ಒಂದು ಕರಡು ಸಂವಿಧಾನ ರಚಿಸಿದರು. ಈ ಸಂವಿಧಾನ ಡೊಮಿನಿಯನ್ ದರ್ಜೆಗೆ ಸರಿಯಾದ ಸಂವಿಧಾನವಾಗಿತ್ತು. ಇದಕ್ಕೆ ಕಾಂಗ್ರೆಸ್‌ನ ಒಳಗೆ ಮತ್ತು ಹೊರಗೆ ತೀವ್ರ ವಿರೋಧವಿತ್ತು. ಇದರಿಂದಾಗಿ ಬೂರ್ಜ್ವಾ ನಾಯಕರು ಪುನಃ ಗಾಂಧೀಜಿಗೆ ಮೊರೆಹೋಗಿ 1928ರ ಕಾಂಗ್ರೆಸ್ ಅಧಿವೇಶನದಲ್ಲಿ ಈ ವರದಿಗೆ ಅನುಮೋದನೆ ಸಿಗುವಂತೆ ಮಾಡಿದರು. ಮೊದಲು ವಿರೋಧಿಸಿದ್ದ ಜವಾಹರಲಾಲ್ ನೆಹ್ರೂ ಸಹ ಸಮ್ಮತಿಸಿದರು.

1929-32ರ ಕಾಲಜಗತ್ತಿನಾದ್ಯಂತ ಸೋವಿಯತ್ ರಷ್ಯಾ ಬಿಟ್ಟು ಎಲ್ಲಾ ರಾಷ್ಟ್ರಗಳು ದೊಡ್ಡ ಬಿಕ್ಕಟ್ಟನ್ನು ಅನುಭವಿಸುತ್ತಿದ್ದವು. ಆರ್ಥಿಕ ಬಿಕ್ಕಟ್ಟಿನಿಂದ ಮುಖ್ಯವಾಗಿ ತೊಂದರೆಗೊಳಗಾದ ದುಡಿಯುವ ವರ್ಗಗಳು ಸ್ವತಂತ್ರ ರಾಷ್ಟ್ರಗಳಲ್ಲಿ ಸಮಾಜವಾದಕ್ಕೆ ವಸಾಹತು ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಪಡೆಯಲು ಹೋರಾಟ ನಡೆಸಿದರು. ಇಂತಹ ಅಂತರಾಷ್ಟ್ರೀಯ ಪರಿಸ್ಥಿತಿಯಲ್ಲಿ, ಕಾಂಗ್ರೆಸ್ ಮಾತ್ರ ಡೊಮಿನಿಯನ್ ದರ್ಜೆ ಕೊಡುವಂತೆ ಮತ್ತು ಇದಕ್ಕಾಗಿ ಕರಡು ಸಂವಿಧಾನ ತಯಾರಿಸಲು ತನ್ನ ಸಹಕಾರ ಉಪಯೋಗಿಸಿಕೊಳ್ಳುವಂತೆ ಬ್ರಿಟೀಷರನ್ನು ಸವಿನಯವಾಗಿ ಒತ್ತಾಯಿಸುತ್ತಿತ್ತು. ಇದಕ್ಕೆ ಜ. ನೆಹರು ಸಹ ಸಮ್ಮತಿಸಿದ್ದರು. ತೀವ್ರಗಾಮಿಗಳಂತೆ ಮಾತನಾಡಿ ನಿರ್ಣಾಯಕ ಘಟ್ಟಗಳಲ್ಲಿ ಬಲಪಂಥೀಯ ಬೂರ್ಜ್ವಾ ನಾಯಕರಿಗೆ ಮಣಿಯುವ ನೆಹ್ರೂರವರ ಸ್ವಭಾವ ರಾಷ್ಟ್ರೀಯ ಚಳುವಳಿಯುದ್ದಕ್ಕೂ ಕಾಣಬಹುದಾಗಿತ್ತು. ಎಡಶಕ್ತಿಗಳ (ಸುಭಾಷ್ ಸ್ಥಾಪಿಸಿದ ಇಂಡಿಪೆಂಡೆನ್ಸ್ ಲೀಗ್ ಮತ್ತು ಕಮ್ಯುನಿಸ್ಟ್ ಪಕ್ಷ)ಒತ್ತಾಯದಿಂದ 'ನೆಹ್ರೂ ವರದಿ' ಅಂಗೀಕರಿಸಲು 1ವರ್ಷ ಅವಧಿ ಮಾತ್ರ ಕೊಡಲಾಯಿತು. ಇದಕ್ಕೆ ಬ್ರಿಟೀಷರು ಯಾವುದೇ ಅನುಕೂಲಕರ ಪ್ರತಿಕ್ರಿಯೆ ಕೊಡದ್ದರಿಂದ ಲಾಹೋರ್ ಅಧಿವೇಶನದಲ್ಲಿಕಾಂಗ್ರೆಸ್ 'ಪೂರ್ಣ ಸ್ವರಾಜ್ಯ'ತನ್ನಉದ್ದೇಶವೆಂದೂ ಮುಂದಿನ ಜನವರಿ 26ನ್ನು 'ಸ್ವಾತಂತ್ರ್ಯ ದಿನ'ವಾಗಿ ಆಚರಿಸಬೇಕೆಂದೂ ಕರೆಕೊಟ್ಟಿತು. ಈ ಕರೆಗೆ ಅಮಿತೋತ್ಸಾಹದಿಂದ ಭಾರತದ ಜನತೆ ಓಗೊಟ್ಟರು. 1919ರ ಚಳುವಳಿಯನ್ನು ಮೀರಿಸುವ ಪ್ರಮಾಣದಲ್ಲಿ ಜನತೆ ತೀವ್ರ ಚಳುವಳಿಗಳಲ್ಲಿ ಭಾಗವಹಿಸಿದರು. ಈ ಚಳುವಳಿಯ ಆಳ ಮತ್ತು ವ್ಯಾಪಕತೆಯಿಂದ ಬೆದರಿದ ಕಾಂಗ್ರೆಸ್ ನಾಯಕರು ಎಲ್ಲಾ ಜನವಿಭಾಗಗಳಲ್ಲಿ ಅದರಲ್ಲೂ ದುಡಿಯುವವರ್ಗಗಳಿಗೆ ಹೆಚ್ಚಿನಪಾತ್ರವಿರುವ ಸಾಮೂಹಿಕ ಚಳುವಳಿಯ ಬದಲು ಗಾಂಧೀಜಿ ಮತ್ತು ಅವರ ಹತ್ತಿರದ ಅನುಯಾಯಿಗಳಿಗೆ ಮಾತ್ರ ಸೀಮಿತವಾದ 'ಉಪ್ಪಿನ ಸತ್ಯಾಗ್ರಹ' ನಡೆಸಲು ನಿರ್ಧರಿಸಿದರು. ಅನಂತರ ಸವಿನಯ ಕಾಯಿದೆ ಭಂಗಕ್ಕೂ ಕರೆ ಕೊಟ್ಟರು. ಈ ಚಳುವಳಿಗೆ ಪುನಃ ಕಾಂಗ್ರೆಸ್ ನಾಯಕರ ನಿರೀಕ್ಷೆಗೆ ಮೀರಿದ ಪ್ರತಿಕ್ರಿಯೆ ಬಂತು. ಶೋಲಾಪುರದಲ್ಲಿ ಕೆಲವು ದಿನಗಳ ಕಾರ್ಮಿಕರ ಆಡಳಿತ, ಪೇಶಾವರದಲ್ಲಿ ಭಾರತೀಯಸೈನ್ಯದ ದಂಗೆ ಮತ್ತು ಚಿತ್ತಗಾಂಗ್ ಪಟ್ಟಣದ ವಿಮುಕ್ತಿ ಮುಂತಾದವುಗಳಿಂದ ಬೆದರಿದಕಾಂಗ್ರೆಸ್ ಗಾಂಧೀಜಿ ನಾಯಕತ್ವದಲ್ಲಿ ಬ್ರಿಟೀಷ್‌ರೊಂದಿಗೆ ಗಾಂಧಿ-ಇರ್ವಿನ್ ಒಪ್ಪಂದದ ರೂಪದಲ್ಲಿ ರಾಜಿಮಾಡಿಕೊಂಡು ಚಳುವಳಿ ವಾಪಸು ತೆಗೆದುಕೊಂಡು, ಪುನಃ ರಾಷ್ಟ್ರೀಯಚಳುವಳಿಯತೀವ್ರತೆಯನ್ನು ಕಡಿಮೆಮಾಡಿತು. ಈ ಒಪ್ಪಂದಕ್ಕೆಗಾಂಧಿ ಒತ್ತಡದಿಂದ ನೆಹ್ರೂ ಮತ್ತು ಸುಭಾಷ್ ಸಹ ಸಮ್ಮತಿಸಿದರು. ಈ ರಾಜಿಮನೋ

[6ನೇ ಪುಟ ನೋಡಿ]

ಆರ್. ಎಸ್. ಎಸ್. – ಜನಸಂಘೀಯರಿಂದ ವಂಚನೆ

ಜನತಾಪಕ್ಷದಲ್ಲಿನ ಆರ್. ಎಸ್. ಎಸ್. ಮತ್ತು ಜನಸಂಘ ಕೂಟವು ದೊಡ್ಡ ಮೋಸವೊಂದರಲ್ಲಿ ತೊಡಗಿದೆ; ಇದಕ್ಕೆ ಜನತಾಪಕ್ಷದ ಕೆಲವರು ಮುಖಂಡರೂ ಶಾಮಿಲಾಗಿದ್ದಾರೆ.

ತುರ್ತುಪರಿಸ್ಥಿತಿಯ ಸರ್ವಾಧಿಕಾರಿಣಿ ಇಂದಿರಾಗಾಂಧಿಯನ್ನು ಸೋಲಿಸುವುದು, ಆಕೆ ಕಟ್ಟಿ ಬೆಳೆಸಿದ್ದ ಸರ್ವಾಧಿಕಾರದ ಚೌಕಟ್ಟನ್ನು ಕಿತ್ತೆಸೆಯುವುದು ಮತ್ತು ಆಕೆಯಿಂದ ತುಳಿಯಲ್ಪಟ್ಟಿದ್ದ ಪ್ರಜಾಸತ್ತೆ ಇನ್ನೆಂದೂ ಅಂತಹ ತುಳಿತಕ್ಕೊಳಗಾಗದಂತೆ ಮಾಡುವುದೇ ಜನರ ಪಾಲಿಗೆ ಅತಿ ದೊಡ್ಡ ಪ್ರಶ್ನೆಯಾಗಿದ್ದ ಕಾಲದಲ್ಲಿ ಆರ್.ಎಸ್.ಎಸ್. ಮತ್ತು ಜನಸಂಘಗಳು ಜನತಾಪಕ್ಷದೊಳಗೆ ಪ್ರವೇಶಿಸಿದ್ದವು. ಜೂನ್ 1977ರಲ್ಲಿ ಕೆಲವು ರಾಜ್ಯಗಳ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದ ಸಂದರ್ಭದಲ್ಲಿ ಅಂತಹ ರಾಜ್ಯಗಳಲ್ಲಿನ ಮುಖ್ಯಮಂತ್ರಿ ಪದವಿಯನ್ನು ತಮ್ಮೊಳಗೇ ಹಂಚಿಕೊಳ್ಳಲು ಜನಸಂಘವು ಬಿ.ಎಲ್.ಡಿ. ಯೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ ಕೆಲಮಟ್ಟಿಗೆ ಜನತಾಪಕ್ಷದೊಳಗೂ, ಅದರ ಬೇರೆ ಬೇರೆ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರದಲ್ಲೂ ಆರ್. ಎಸ್. ಎಸ್. ಜನಸಂಘಗಳ ಪ್ರಾಬಲ್ಯ ಇನ್ನಷ್ಟು ಹೆಚ್ಚುವಂತಾಯಿತು. ಆದರೆ, ಬಿ. ಎಲ್. ಡಿ. ಯೊಡನೆ ಜನಸಂಘದ ಮಧುಚಂದ್ರ ಹೆಚ್ಚು ಕಾಲ ಉಳಿಯಲಿಲ್ಲ. ಈ ಎರಡೂ ಗುಂಪುಗಳ ನಡುವೆ ತಿಕ್ಕಾಟ ತೋರಿಬರಲು ಪ್ರಾರಂಭಿಸಿದ ಕಾಲದಲ್ಲೇ ಜನತಾಪಕ್ಷದಲ್ಲಿ 'ದ್ವಂದ್ವ ಸದಸ್ಯತನ'ದ ವಿವಾದವೂ ತಲೆಯೆತ್ತಿತು. ಆರ್. ಎಸ್. ಎಸ್. ನ ಸದಸ್ಯರು ಜನತಾಪಕ್ಷದ ಸದಸ್ಯರಾಗಿ ಮುಂದುವರಿಯಬಹುದೇ ಎಂಬುದೇ ಆ ಪ್ರಶ್ನೆ.

ಪಕ್ಷದೊಳಗೆ ಸಾಂಸ್ಥಿಕ ಚುನಾವಣೆಗಳನ್ನು ನಡೆಸುವ ಸಲುವಾಗಿ ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ನಿರ್ಧಾರದ ಮೇಲೆ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ. ರಾಮಕೃಷ್ಣ ಹೆಗಡೆ ಅವರ ನೇತೃತ್ವದಲ್ಲಿ ನೇಮಕಗೊಂಡಿದ್ದ ಏಳುಜನ ಸದಸ್ಯರುಳ್ಳ ಜನತಾಪಕ್ಷ ಸಂವಿಧಾನಿಕ ಸಮಿತಿಯು ಈ ಪ್ರಶ್ನೆಯನ್ನು ಕೂಲಂಕುಷವಾಗಿ ಅಭ್ಯಸಿಸಿ ದ್ವಂದ್ವ ಸದಸ್ಯತನ ಇರಕೂಡದೆಂದು ಈ ಏಳು ಸದಸ್ಯರಲ್ಲಿ ಆರು ಮಂದಿ ಬಹುಮತದ ತೀರ್ಮಾನವನ್ನೂ ನೀಡಿದ್ದರು. ಇದರರ್ಥ ಜನತಾಪಕ್ಷದೊಳಗೆ ಮುಂದುವರಿಯಬಯಸುವ ಆರ್. ಎಸ್. ಎಸ್. ಸದಸ್ಯರು ಆರ್. ಎಸ್. ಎಸ್. ನೊಂದಿಗೆ ತಮಗಿರುವ ಸಂಬಂಧವನ್ನು ಕಡಿದುಕೊಳ್ಳಬೇಕು. ಈ ಸಲಹೆಗೆ ವಿರೋಧ ವ್ಯಕ್ತಪಡಿಸಿದ ಒಬ್ಬರೇ ಸದಸ್ಯರೆಂದರೆ ಜನಸಂಘದ ಮುಂದಾಳು ಸುಂದರ್‌ಸಿಂಗ್ ಭಂಡಾರಿ ಮಾತ್ರ, ಆರ್.ಎಸ್.ಎಸ್. ಸದಸ್ಯರು ಜನತಾಪಕ್ಷದಲ್ಲಿರಕೂಡದೆಂಬ ನಿಲುಮೆಯನ್ನು ಕಡ್ಡಾಯಗೊಳಿಸಿದರೆ ತಾವು ಪಕ್ಷವನ್ನು ಒಡೆಯುವುದಾಗಿ ಬೆದರಿಕೆಯೊಡ್ಡಿದ ಇತರ ಆರ್.ಎಸ್.ಎಸ್. ಜನಸಂಘ ಮುಖಂಡರೂ ಸಹಜವಾಗಿಯೇ ಭಂಡಾರಿ ಅವರನ್ನು ಬೆಂಬಲಿಸಿದರು. ಪಕ್ಷದ ನೇತೃತ್ವವು ಈ ಬೆದರಿಕೆಗೆ ಮಣಿದು ದ್ವಂದ್ವ ಸದಸ್ಯತನದ ಸಮಸ್ಯೆಯನ್ನು ಅಲ್ಲಿಗೇ ಕೈಬಿಟ್ಟಿತು.

ಆದರೆ ಇಷ್ಟರೊಳಗಾಗಿ ಆರ್.ಎಸ್.ಎಸ್. ಜನಸಂಘದ ಮುಖಂಡರು ಮೊರಾರ್ಜಿ ದೇಸಾಯಿ ಅವರ ಜೊತೆಗೆ ತಮ್ಮ ಸಂಬಂಧವನ್ನು ನಿಕಟಗೊಳಿಸಿದ್ದರು. ಆರ್.ಎಸ್.ಎಸ್. ಮತ್ತು ಜನಸಂಘ ಕೂಟದ ಮೇಲೆ ಪ್ರಧಾನಿಯ ಅವಲಂಬನೆ ಹೆಚ್ಚಾದಂತೆಲ್ಲ ಈ ಕೂಟವು ಪಕ್ಷ ಹಾಗೂ ಸರಕಾರದಲ್ಲಿ ಅತಿ ಮುಖ್ಯ ಸ್ಥಾನಗಳನ್ನು ಆಕ್ರಮಿಸಲಾರಂಭಿಸಿತು. ಬಿಹಾರ್, ಉತ್ತರಪ್ರದೇಶ, ಮತ್ತು ಹರ್ಯಾಣದ ಬಿ.ಎಲ್.ಡಿ.ಗೆ ಸೇರಿದ ಮುಖ್ಯಮಂತ್ರಿಗಳನ್ನು ಪದಚ್ಯುತಗೊಳಿಸಲು ಆರ್. ಎಸ್. ಎಸ್, ಜನಸಂಘ ಕೂಟವೇ ಕಾರಣ.

ಇದರೊಂದಿಗೆ ಆಲಿಘರ್, ಜಂಶೆಡ್‌ಪುರ ಮತ್ತಿತರಕಡೆ ನಡೆದ ಕೋಮುಗಲಭೆಗಳಲ್ಲಿ ಆರ್.ಎಸ್.ಎಸ್. ನೇರವಾಗಿ ಪಾಲುಗೊಂಡದ್ದೂ ಬೆಳಕಿಗೆ ಬಂತು. ಈ ಹಿನ್ನೆಲೆಯಲ್ಲಿ ಜನತಾಪಕ್ಷದೊಳಗೂ ಜನರ ನಡುವೆಯೂ ಆರ್.ಎಸ್.ಎಸ್. ವಿರೋಧಿ ಭಾವನೆ ತೀವ್ರವಾಗಿ ಬೆಳೆದು ಬಂತು. ಇಷ್ಟಾದರೂ ಜನತಾಪಕ್ಷದ ಪ್ರಭಾವೀ ಮುಖಂಡರು ಈ ಬಗ್ಗೆ ಯಾವುದೇ ಆತ್ಮ ವಿಮರ್ಶೆಗೆ ಸಿದ್ಧರಿರಲಿಲ್ಲ. ಕಡೆಗೆ ಈ ಪ್ರಶ್ನೆಯನ್ನು ಸಮಗ್ರವಾಗಿ ನಿರ್ಧರಿಸಲು ಮೊರಾರ್ಜಿ ಅವರ ನಿರ್ಣಯಕ್ಕೆ ಬಿಡುವುದೆಂದೂ ನಿಶ್ಚಯಿಸಲಾಯಿತು ಅಷ್ಟೆ, ಮೊರಾರ್ಜಿ ಅವರಿಂದ ಯಾವುದೇ ತೀರ್ಮಾನ ಬರಲಿಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಕೊನೆಗೆ ಜನತಾಪಕ್ಷವು ಕುಸಿದು, ಮೊರಾರ್ಜಿ ಅವರು ಪ್ರಧಾನಿ ಪದಕ್ಕೆ ರಾಜಿನಾಮೆ ನೀಡಿದ ಮೇಲೆ, ಅಳಿದುಳಿದ ಜನತಾಪಕ್ಷವನ್ನು ಮರಳಿ ಒಂದುಗೂಡಿಸುವ ಉದ್ದೇಶದಿಂದ ಈ ಪ್ರಶ್ನೆಯನ್ನು ಮತ್ತೆ ವಿಮರ್ಶಿಸುವ ಪ್ರಯತ್ನಗಳೂ ನಡೆದವು.

ಪಾರ್ಲಿಮೆಂಟ್ ಸದಸ್ಯರನ್ನೂ ವಿಧಾನಸಭಾ ಸದಸ್ಯರನ್ನೂ ಆರ್. ಎಸ್.ಎಸ್. ನ ದೈನಂದಿನ ಚಟುವಟಿಕೆಗಳಿಂದ ದೂರವಿರಿಸುವ ಪ್ರಶ್ನೆಯನ್ನು ಪರಿಶೀಲಿಸಲು ಸಂಘವು ಸಿದ್ಧವಿದೆಯೆಂದು ಜುಲೈ 24 ರಂದು ಆರ್. ಎಸ್. ಎಸ್. ನ ಪ್ರಧಾನ ಕಾರ್ಯದರ್ಶಿ ರಾಜೇಂದ್ರಸಿಂಗ್ ನವದೆಹಲಿಯಲ್ಲಿ ಒಂದು ಹೇಳಿಕೆ ಹೊರಡಿಸಿದರು. ಆದರೆ ಇದಕ್ಕೆ ಆರ್. ಎಸ್. ಎಸ್. ನ ಸಂವಿಧಾನದಲ್ಲಿ ತಿದ್ದುಪಡಿಯ ಅವಶ್ಯಕತೆ ಇರುವ ಕಾರಣ ಅದನ್ನು ಜನರಲ್ ಕೌನ್ಸಿಲಿನ ಮುಂದೆ ಇರಿಸಬೇಕಾಗುತ್ತದೆಂದೂ ಅವರು ಹೇಳಿದರು.

ಮೊರಾರ್ಜಿದೇಸಾಯಿ ಆರ್.ಎಸ್. ಎಸ್. ನ ನಾಗಪುರ ಕೇಂದ್ರ ಕಚೇರಿಗೆ ತರ್ತು ಸಂದೇಶ ಕಳುಹಿಸಿ ತನ್ನನ್ನು ಉಳಿಸುವಂತೆ ಮೊರೆಯಿಟ್ಟ ಮೇಲೆ ಮತ್ತು ಜನತಾಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರು ಜುಲೈ 22ರಂದು ತಾನು ಮದ್ರಾಸಿನಿಂದ ಹಿಂದಿರುಗುವ ವೇಳೆ ಆರ್. ಎಸ್. ಎಸ್. ನ ಪ್ರಮುಖ ದೇವರಸ್ ಅವರನ್ನೂ ಇತರ ಘಟಾನುಘಟಿಗಳನ್ನೂ ನಾಗಪುರದಲ್ಲಿ ಭೇಟಿಯಾದ ಮೇಲಷ್ಟೆ ಮೇಲಿನ ಹೇಳಿಕೆಯನ್ನು ಹೊರಡಿಸಲಾಯಿತೆಂಬುದನ್ನು ಗಮನಿಸಬೇಕು. ಆರ್. ಎಸ್. ಎಸ್.ನ ಹೇಳಿಕೆಯನ್ನು ಚಂದ್ರಶೇಖರ್ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಹಾಗಿದ್ದರೂ "ಜನತಾಪಕ್ಷ ಮತ್ತು ಆರ್. ಎಸ್. ಎಸ್. ಗಳು ಪರಸ್ಪರ ಪ್ರತ್ಯೇಕಗೊಂಡಿವೆ" ಎಂಬ ಅವರ ಹೇಳಿಕೆಯನ್ನೂ "ಕಳೆದ ಎರಡು ವರ್ಷಗಳಲ್ಲಿ ಆರ್. ಎಸ್. ಎಸ್. ಬದಲಾಯಿಸಿದೆ ಹೊರತು ಜನತಾಪಕ್ಷವಲ್ಲ" ಎಂಬ ಅವರ ಪ್ರಮಾಣಪತ್ರವನ್ನೂ ಯಾರೂ ಸ್ವೀಕರಿಸಲು ಸಿದ್ಧವಿರಲಿಲ್ಲ. ಏಕೆಂದರೆ ಆರ್. ಎಸ್. ಎಸ್. ಹಾಗೂ ಜನತಾಪಕ್ಷ ಪ್ರತ್ಯೇಕಗೊಳ್ಳುವುದರ ಬಗ್ಗೆ ಜನತಾಪಕ್ಷ ಪ್ರಾಮಾಣಿಕವಾಗಿರುವುದೇ ಆಗಿದ್ದರೆ ಜನತಾಪಕ್ಷ ತನ್ನಲ್ಲಿರುವ ಆರ್. ಎಸ್. ಎಸ್. ಸದಸ್ಯರು ಸಂಘದಿಂದ ಎಲ್ಲಾ ಸಂಬಂಧಗಳನ್ನೂ ಕಳಚಿ ಹೊರಬರಬೇಕು; ಅದು ಸಾಧ್ಯವಿಲ್ಲವಾದರೆ ಜನತಾಪಕ್ಷವನ್ನು ಬಿಟ್ಟು ಹೋಗಬೇಕು ಎಂಬ ಕೊನೇ ಎಚ್ಚರಿಕೆಯನ್ನು ನೀಡಬಹುದಾಗಿತ್ತು. ಅದರ ಬದಲು ಪ್ರಧಾನಿ ಹಾಗೂ ಪಕ್ಷಾಧ್ಯಕ್ಷರು ತಮಗೆ ಅನುಕೂಲವಾಗುವಂತಹ ಯಾವುದಾದರೂ ಹೇಳಿಕೆಯೊಂದನ್ನು ನೀಡುವಂತೆ ಆರ್. ಎಸ್. ಎಸ್. ಪ್ರಭೃತಿಗಳ ಬಳಿ ಅಂಗಲಾಚಲು ಹೋಗಿದ್ದರು. ಜನತಾಪಕ್ಷದೊಳಗಿದ್ದುಕೊಂಡೇ ತಮ್ಮ ದುಷ್ಟ ಚಟುವಟಿಕೆಗಳನ್ನು ಮುಂದುವರಿಸಲು ಹಾಗೂ ಅದನ್ನು ಮುಚ್ಚುಮರೆ ಮಾಡುವ ಸಲುವಾಗಿ ಆರ್.ಎಸ್.ಎಸ್. ಜನಸಂಘಗಳು ಅಂತಹ ಹೇಳಿಕೆಯೊಂದನ್ನು ಕೊಡಲೂ ಸಿದ್ಧರಾಗಿದ್ದರು. ಆದರೆ ಇಷ್ಟು ದೀರ್ಘಕಾಲದ ವರೆಗೆ ಕೊಳೆಯಲು ಬಿಟ್ಟಿದ್ದ ಪ್ರಶ್ನೆಯ ಬಗ್ಗೆ ಜನತಾ ಮುಂದಾಳುಗಳು ಇನ್ನೂ ಏನನ್ನೂ ಹೇಳಲು ಸಿದ್ಧರಿರಲಿಲ್ಲ.

ತಾ. 28-7-1979 ರಂದು ಜನತಾ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ಸಮಾವೇಶಗೊಂಡಾಗ ಸುರೇಂದ್ರ ಮೋಹನ್ ಮತ್ತು ಮೋಹನ್ ಧಾರಿಯಾ ಅವರು ದ್ವಂದ್ವ ಸದಸ್ಯತ್ವದ ಪ್ರಶ್ನೆಯನ್ನು ಮರಳಿ ಎತ್ತಿದರು. ಇವರಿಬ್ಬರು ಮತ್ತು ಇತರ ಕೆಲವರ ಮಧ್ಯೆ ಬಿಸಿ ಮಾತಿನ ಚಕಮುಕಿಯೂ ನಡೆಯಿತು. ಆರ್. ಎಸ್. ಎಸ್. ಮುಂದಾಳುಗಳು ನೀಡಿದ ಹೇಳಿಕೆ ಮಾತ್ರದಿಂದ ದ್ವಂದ್ವ ಸದಸ್ಯತ್ವದ ಪ್ರಶ್ನೆ ಬಗೆಹರಿಯಿತು ಎನ್ನುವ ಬಗ್ಗೆ ತಮಗೇನೂ ತೃಪ್ತಿಯಾಗಿಲ್ಲ ಎಂದು ಮೋಹನ್ ಧಾರಿಯೂ ಮತ್ತಿತರರು ಹೇಳಿದರು. ಹಾಗಾದಿ ಹೇಳಿಕೆಯ ಎರಡನೆಯ ಕಂತು ಜುಲೈ 29 ರಂದು ಪ್ರಕಟವಾಯಿತು. ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ಅಧಿವೇಶನದ ಕೊನೆಯ ಹಂತದಲ್ಲಿ ಪಕ್ಷದ ನಿಯಮಾವಳಿಗೆ ಈ ಕೆಳಗಿನ ತಿದ್ದುಪಡಿಯೊಂದನ್ನು ಅಂಗೀಕರಿಸಲಾಯಿತು: "ಹಿಂದೂ ಅಥವಾ ಇಸ್ಲಾಂ ರಾಷ್ಟ್ರವೆನ್ನುವ ಸಿದ್ಧಾಂತವು ತೀರಾ ಹಳೆಯ ಗೊಡ್ಡು ವಿಚಾರ. ಅದು ಜಾತ್ಯತೀತ ರಾಷ್ಟ್ರದ ತತ್ವಗಳಿಗೆ ಹೊಂದಿಕೆಯಾಗಲಾರದು. ಧಾರ್ಮಿಕ ರಾಷ್ಟ್ರ ಸಿದ್ಧಾಂತವು ಜನತಾಪಕ್ಷದ ತತ್ವಗಳಿಗೆ ವಿರುದ್ಧವಾಗಿದೆ. ಮಾತ್ರವಲ್ಲ ಮತೀಯ ರಾಷ್ಟ್ರದ ಸಿದ್ಧಾಂತವನ್ನು ನೆಚ್ಚಿಕೊಂಡಿರುವ ಯಾವುದೇ ಸಂಸ್ಥೆ ಜನತಾಪಕ್ಷದ ಸದಸ್ಯನಾಗಿರಲು ಸಾಧ್ಯವಿಲ್ಲ."

ಇದಕ್ಕಿಂತ ಹೆಚ್ಚಿನ ಅಸ್ಪಷ್ಟ ಹಾಗೂ ಗೊಂದಲಪೂರ್ಣ ಸೂತ್ರವನ್ನು ತಯಾರಿಸಲು ಸಾಧ್ಯವಿರಲಿಲ್ಲವೇನೋ. ಅಂತೂ ಜನಸಂಘ ಮತ್ತು ಆರೆಸ್ಸೆಸ್ ಬಣಗಳಿಗೆ ಇದರಿಂದ ತುಂಬಾ ಖುಶಿಯಾಯಿತು. ಎಷ್ಟು ಖುಶಿಯಾಯಿತೆಂದರೆ, ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ ಹೆಗಡೆ ಪತ್ರಿಕಾ ವರದಿಗಾರರೊಂದಿಗೆ ಮಾತಾಡುತ್ತಾ, "ಇನ್ನು ಮುಂದೆ ಜನತಾಪಕ್ಷದ ಸದಸ್ಯರು ಆರೆಸ್ಸೆಸ್ ನ ಸದಸ್ಯರಾಗುವಂತಿಲ್ಲ; ಈ ನಿರ್ಣಯವನ್ನು ಉಲ್ಲಂಘಿಸುವವರು ಯಾರೇ ಆಗಲಿ ಅವರನ್ನು ಶಿಸ್ತಿನಕ್ರಮಕ್ಕೆ ಒಳಪಡಿಸಲಾಗುವುದು" ಎಂದಾಗ ಆರೆಸ್ಸೆಸ್-ಜನಸಂಘ ಮುಖಂಡರು ಅವರ ಮಾತನ್ನು ಖಂಡಿಸಿ ಆರೆಸ್ಸೆಸ್ ಮಟ್ಟಿಗೆ ಹೇಳುವುದಿದ್ದರೆ ಈ ತಿದ್ದುಪಡಿ ಕೇವಲ ಕಣ್ಣೊರಸುವ ಪ್ರಯತ್ನ ಮಾತ್ರ ಹೊರತು ಅದಕ್ಕೆ ಬೇರೇನೂ ಅರ್ಥವಿಲ್ಲವೆಂದೂ ವಿವರಣೆ ನೀಡಿದರು.

ಜನಸಂಘದ ಇಬ್ಬರು ಪಾರ್ಲಿಮೆಂಟ್ ಸದಸ್ಯರಾದ ಜೆ. ಎ. ಮಾಥುರ್ ಮತ್ತು ಜಗನ್ನಾಥರಾವ್ ಜೋಶಿ ಅವರು ಜುಲೈ 30 ರಂದು ಜಂಟಿ ಹೇಳಿಕೆಯೊಂದನ್ನು ಹೊರಡಿಸಿ ಆರೆಸ್ಸೆಸ್ ಜೊತೆಗೆ ಸಂಬಂಧವಿರಿಸಿಕೊಂಡಿದ್ದ ಹಿಂದಿನ ಬಹುಸಂಖ್ಯಾತ ಸದಸ್ಯರು ಇನ್ನೂ ಹಾಗೆಯೇ ಮುಂದುವರಿಯುತ್ತಿದ್ದಾರೆಂದೂ ಘೋಷಿಸಿದರು. 'ಜನತಾ ರಾಷ್ಟ್ರೀಯ ಕಾರ್ಯಕಾರಿಣಿಯು ತನ್ನ ಸದಸ್ಯರು ಆರೆಸ್ಸೆಸ್‌ಗೆ, ನಿಷ್ಠೆ ಇರಿಸಿಕೊಳ್ಳುವುದರ ಮೇಲೆ ಪ್ರತಿಬಂಧ ಹೇರಿದೆ' ಎಂಬುದಾಗಿ ಪ್ರಕಟವಾಗಿದ್ದ ಪತ್ರಿಕಾ ವರದಿ ಸಂಪೂರ್ಣ ಆಧಾರ ರಹಿತವೆಂದೂ ಈ ಇಬ್ಬರೂ ವಿವರಿಸಿದರು. ಅವರ ಅಭಿಮತದಂತೆ ಪ್ರತಿಬಂಧ ಹೇರಲಾಗಿರುವುದು ಕೇವಲ ಮತೀಯ ರಾಷ್ಟ್ರದ ಸಿದ್ಧಾಂತವನ್ನು ಬೋಧಿಸುವ ಸಂಘಟನೆಗಳ ಬಗ್ಗೆ ಮಾತ್ರ; ಆರೆಸ್ಸೆಸ್ ಅದರ ಪ್ರಮುಖ ದೇವರಸ್ ಹೇಳಿರುವಂತೆ ಮತೀಯ ರಾಷ್ಟ್ರದ ಸಿದ್ಧಾಂತವನ್ನು ತಿರಸ್ಕರಿಸಿದೆ ಮಾತ್ರವಲ್ಲ ಜಾತ್ಯತೀತತೆಗೆ ಬದ್ಧವಾಗಿದೆ!

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಜನತಾಪಕ್ಷಕ್ಕೆ ಸೇರಿರುವ ವಿಧಾನ ಮಂಡಲದ ಸದಸ್ಯರು ಆರೆಸ್ಸೆಸ್ ಜೊತೆಗೆ ಸಂಬಂಧವಿರಿಸಿಕೊಳ್ಳುವುದನ್ನು ನಿಷೇಧಿಸಿದೆ ಎನ್ನುವ ರಾಮಕೃಷ್ಣ ಹೆಗಡೆ ಅವರ ವಾದವನ್ನು ಉತ್ತರ ಪ್ರದೇಶದ ಇಬ್ಬರು ಪ್ರಮುಖ ಶಾಸಕರಾದ ರಾಜೇಂದ್ರಗುಪ್ತಾ ಮತ್ತು ಅವದೇಶ್ ಕುಮಾರ್ ಅವರು ಪ್ರಶ್ನಿಸಿದರು. ರಾಷ್ಟ್ರೀಯ ಕಾರ್ಯಕಾರಿಣಿಯ ನಿರ್ಧಾರವು ಮತೀಯ ರಾಷ್ಟ್ರ ಸ್ಥಾಪನೆಯ ಸಿದ್ಧಾಂತವನ್ನು ನಂಬುವ ಪಕ್ಷಗಳಿಗೆ ಮಾತ್ರ ಅನ್ವಯಿಸುತ್ತದೆ; ಇದು ಆರೆಸ್ಸೆಸ್‌ನ ಕಾರ್ಯಕ್ರಮದಲ್ಲಿ ಸೇರಿಲ್ಲವಾದ ಕಾರಣ ಹೆಗಡೆಯವರು ಕಾರ್ಯಕಾರಿಣಿಯ ನಿರ್ಧಾರವನ್ನು ತಪ್ಪಾಗಿ ತಿಳಿಸಿದ್ದಾರೆ ಎಂದೂ ಅವರಿಬ್ಬರು ಆಪಾದಿಸಿದರು. ಆರೆಸ್ಸೆಸ್ ಜೊತೆಗೆ ಸಂಪರ್ಕವಿರಿಸಿಕೊಂಡುದಕ್ಕಾಗಿ ಜನತಾ ಪಾರ್ಟಿ ಸದಸ್ಯರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆನ್ನುವ ರಾಮಕೃಷ್ಣ ಹೆಗಡೆ ಅವರ ವಾದ ಸರಿಯಲ್ಲವೆಂದೂ ಅವರು ಹೇಳಿದರು.

ಈ ಟೀಕೆಗಳನ್ನು ಎದುರಿಸಲಾಗದೆ ರಾಮಕೃಷ್ಣ ಹೆಗಡೆ ಅವರು ಅವಸರವಾಗಿ ಹಿಂದೆ ಸರಿಯಬೇಕಾಯಿತು. "ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯು ಕೇವಲ ಮತೀಯ ರಾಷ್ಟ್ರ ಸ್ಥಾಪನೆಯ (ಹಿಂದೂ ಅಥವಾ ಮುಸ್ಲಿಂ) ಸಿದ್ಧಾಂತದಲ್ಲಿ ವಿಶ್ವಾಸವಿರಿಸಿರುವ ಸಂಘಟನೆಗಳ ಬಗ್ಗೆ ತನ್ನ ನಿಲುಮೆಯನ್ನು ಹೇಳಿದೆಯೇ ಹೊರತು ಯಾವುದೇ ಸಂಘಟನೆಯನ್ನು ಹೆಸರೆತ್ತಿ ಹೇಳಿಲ್ಲ ಎಂದು ಅವರು ಜುಲೈ 30 ರಂದು "ಸ್ಪಷ್ಟೀಕರಣ" ನೀಡಿ ಹೇಳಿಕೆಯಿತ್ತರು. "ಆರೆಸ್ಸೆಸ್ ಅಥವಾ ಇನ್ನು ಯಾವುದೇ ಸಂಘಟನೆಯನ್ನೂ ಹೆಸರಿಸಲಾಗಿಲ್ಲ" ಎಂದೂ ಅವರು ಹೇಳಿದರು.

ಜನತಾಪಕ್ಷದ ನಾಯಕರಾಗಿ ಹೊಸದಾಗಿ ಆಯ್ಕೆಯಾದ ಜಗಜೀವನ ರಾಮರನ್ನೂ ಅದೇದಿನ ಪತ್ರಕರ್ತರು, "ಜನತಾಪಕ್ಷದ ಸದಸ್ಯರು ಆರೆಸ್ಸೆಸ್‌ನಲ್ಲಿರಬಹುದೇ ಅಥವಾ ಅದರ ಚಟುವಟಿಕೆಗಳಲ್ಲಿ ಭಾಗವಹಿಸಬಹುದೇ" ಎಂಬುದಾಗಿ ಪ್ರಶ್ನಿಸಿದರು. "ಜನತಾ ಪಾರ್ಟಿ ಸದಸ್ಯರು ಆರೆಸ್ಸೆಸ್ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾದ ಅಗತ್ಯವಿಲ್ಲವೆಂದು ಸ್ವತಃ ಆರೆಸ್ಸೆಸ್‌ಸರಸಂಘಚಾಲಕರೇ ಹೇಳಿದ್ದಾರೆ." ಎನ್ನುವ ಮೂಲಕ ರಾಮ್ ಈ ಪ್ರಶ್ನೆಯಿಂದ ಜಾರಿಕೊಂಡರು. ಹಾಗಾದರೆ ಜನತಾ ಮುಂದಾಳುಗಳು ಈ ಬಗ್ಗೆ ಏನು ಹೇಳುತ್ತಾರೆ ಎನ್ನುವ ಪ್ರಶ್ನೆಗೆ ಅವರ ಬಳಿ ಉತ್ತರವಿರಲಿಲ್ಲ.

ಹೀಗೆ ಪ್ರತಿಯೊಂದು ಪ್ರಶ್ನೆಯೂ ಮೊದಲು ಇದ್ದ ಸ್ಥಿತಿಯಲ್ಲೇ ಇದೆ. ಆರೆಸ್ಸೆಸ್ ಜನಸಂಘಗಳು ಜನತಾಪಕ್ಷದಲ್ಲಿ ಇನ್ನೂ ಇರಬಹುದು; ಇದೀಗ ಅಳಿದುಳಿದಿರುವ ಜನತಾಪಕ್ಷವು ಇವುಗಳ ಕೈಯ್ಯಲ್ಲಿ ಬಂದಿಯಾಗಿಯೇ ಇರಬೇಕು. ಆರೆಸ್ಸೆಸ್ ಮತ್ತು ಜನಸಂಘದವರು ಏನೇ ಹೇಳಲಿ, ಜನತಾಪಕ್ಷದ ಮುಂದಾಳುಗಳು ಏನೇ ಪ್ರಮಾಣಪತ್ರ ನೀಡಲಿ, ಆರೆಸ್ಸೆಸ್ ಮೊದಲಿನಂತೆಯೇ ಈಗಲೂ ಬಹುಸಂಖ್ಯಾತ ಜಾತೀಯ ಜನರ ಅಪ್ಪಟ ಕೋಮುವಾದಿ ಸಂಘಟನೆಯಾಗಿಯೇ ಉಳಿಯಲಿದೆ. ಅದರ ಮುಂದಾಳುಗಳು ಆಲಿಘರ್ ಮತ್ತು ಜಂಶೆಡ್‌ಪುರಗಳಲ್ಲಿ ನಡೆ

[6ನೇ ಪುಟ ನೋಡಿ]

ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ಸಿ. ಪಿ. ಐ. ಹಿಂದೇಟು

—ಇ. ಎಂ. ಎಸ್. ನಂಬೂದಿರಿಪಾದ್

'ನ್ಯೂ ಏಜ್' ಪತ್ರಿಕೆಯ ಅಗೋಸ್ತು 5ನೇ ತಾರೀಕಿನ ಸಂಚಿಕೆಯಲ್ಲಿ ಭೂಪೇಶಗುಪ್ತಾ ಅವರು "ಜನತಾ ಮರಳಿ ಬರುವ ಯತ್ನವನ್ನು ವಿಫಲಗೊಳಿಸಲಾಗಿದೆ; ಜನರ ಬೇಡಿಕೆಗಳನ್ನು ಈಡೇರಿಸುವಂತೆ ಸಮ್ಮಿಶ್ರ ಸರಕಾರವನ್ನು ಈಗ ಒತ್ತಾಯಿಸಿರಿ" ಎಂಬ ತಲೆಬರಹದಡಿ ಧೀರ್ಘವಾದ ಲೇಖನವೊಂದನ್ನು ಬರೆದಿದ್ದಾರೆ. ಇದೇ ಸಂಚಿಕೆಯಲ್ಲಿ ರಾಜೇಶ್ವರರಾವ್ ಮತ್ತು ಎನ್.ಕೆ.ಕೃಷ್ಣನ್‌ರವರ ಎರಡುಹೇಳಿಕೆಗಳನ್ನೂ ಮುದ್ರಿಸಲಾಗಿದೆ. ಭೂಪೇಶ ಗುಪ್ತರ ಲೇಖನದಲ್ಲಿರುವಂತೆ ಈ ಎರಡು ಹೇಳಿಕೆಗಳಲ್ಲೂ 'ದೇಶವನ್ನು ಗಂಭೀರ ಅವ್ಯವಸ್ಥೆಯಲ್ಲಿ ಸಿಲುಕಿಸಿದ್ದ' ಜನತಾ ಸರಕಾರವನ್ನು ಕಿತ್ತೊಗೆದ ಬಗ್ಗೆ ತುಂಬಾ ಸಂತೋಷ ವ್ಯಕ್ತಪಡಿಸಲಾಗಿದೆ.

ಜನತಾ ಸರ್ಕಾರವನ್ನು ಆರೆಸ್ಸೆಸ್-ಜನಸಂಘ ಕೂಟವು ತನ್ನ ಕೈಗೊಂಬೆಯಾಗಿ ಮಾರ್ಪಡಿಸಿಕೊಂಡು ಹೋಗಲು ಅಸಮರ್ಥವಾಗಿ, ಕಡೆಗೆ ತಾನೇ ಅಧಿಕಾರವನ್ನು ತ್ಯಜಿಸಬೇಕಾಗಿ ಬಂದುದು ಈ ದೇಶದ ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಶಕ್ತಿಗಳಿಗೆ ಲಭಿಸಿದ ಒಂದು ಅಮೋಘ ವಿಜಯವೆನ್ನಬೇಕು. ಈ ವಿಜಯವನ್ನು ಕೈಗೂಡುವಂತೆ ಮಾಡುವಲ್ಲಿ ಸಿ. ಪಿ. ಐ. (ಎಂ) ವಹಿಸಿದ ಪಾತ್ರವೇನೆಂಬುದೂ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ.

ಆದರೆ ಆರೆಸ್ಸೆಸ್-ಜನಸಂಘದ ಈ ಪರಾಜಯದಿಂದಾಗಿ ಸಿ. ಪಿ. ಐ. ಮುಂದಾಳುಗಳು ಅದೆಷ್ಟು ವಿಪರೀತ ಹರ್ಷಿತರಾಗಿದ್ದಾರೆಂದರೆ ಅವರು ಇದರ ಜೊತೆಗೇ ಇಂದಿರಾಗಾಂಧಿ ಪ್ರತಿನಿಧಿಸುತ್ತಿರುವ ಸರ್ವಾಧಿಕಾರಿ ಶಕ್ತಿಗಳ ಕುಕೃತ್ಯಗಳ ಕಡೆಗೆ ಉದ್ದೇಶಪೂರ್ವಕವಾಗಿ ಕಣ್ಣು ಮುಚ್ಚಿ ಕುಳಿತಿದ್ದಾರೆ; ಇದು ತೀರಾ ಖೇದಕರ.

"ಇಂದಿರಾಗಾಂಧಿಗೆ ಈಗಲೂ ಜನರ ನಡುವೆ ಸಾಕಷ್ಟು ಬೆಂಬಲವಿದೆ; ಮತ್ತು ಈ ಬೆಂಬಲವನ್ನೂ ಆದರೊಂದಿಗೆ ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ (ಐ) ಹೊಂದಿರುವ ಎಪ್ಪತ್ತಕ್ಕೂ ಮಿಕ್ಕಿದ ಸಂಸತ್ ಸದಸ್ಯರನ್ನೂ ಉಪಯೋಗಿಸಿಕೊಂಡು ಆಕೆಯ ಪಕ್ಷವು ಇದೀಗ ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಅಧಿಕಾರಕ್ಕಾಗಿ ಬಾಯಿಬಿಡುವ ಪ್ರತಿಯೊಬ್ಬರ ಜೊತೆಗೂ ಒಂದಲ್ಲೊಂದು ಬಗೆಯ ಷಡ್ಯಂತ್ರ ರಚಿಸುವುದರಲ್ಲಿ ನಿರತವಾಗಿದೆ" ಎಂದು ನಾವು 1977ರ ಲೋಕಸಭಾ ಚುನಾವಣೆಗಳ ಬಳಿಕ ಹೇಳಿದ್ದೆವು. ಇಂದಿರಾಗಾಂಧಿಯ ಈ ಹಂಚಿಕೆ ತೀರಾ ಸುಲಭವಾಗಿ ಯಶಸ್ವಿಯಾಗುವಷ್ಟು ಈಗಿನ ಪರಿಸ್ಥಿತಿ ಅಷ್ಟೇನೂ ಅನುಕೂಲಕರವಾಗಿಲ್ಲ. ಹಾಗಿದ್ದರೂ ಇಷ್ಟರಿಂದಲೇ ಸರ್ವಾಧಿಕಾರಿ ಶಕ್ತಿಗಳು ಈಗಲೂ ಮುಂದೊಡ್ಡುತ್ತಿರುವ ಅಪಾಯವನ್ನು ಕೀಳಂದಾಜು ಮಾಡುವುದೂ ಸರಿಯಲ್ಲ.

ದುರದೃಷ್ಟವಶಾತ್ ಭೂಪೇಶ ಗುಪ್ತಾ ಅವರ ಲೇಖನದಲ್ಲಾಗಲೀ ಮೇಲೆ ಹೇಳಲಾದ ಎರಡು ಹೇಳಿಕೆಗಳಲ್ಲಾಗಲೀ ಎಷ್ಟು ಹುಡುಕಿದರೂ ಸಿ. ಪಿ. ಐ. ಗೆ ಈ ಬಗ್ಗೆ ಒಂದಿಷ್ಟಾದರೂ ಅರಿವು ಇರುವ ಸೂಚನೆ ಎಲ್ಲೂ ಕಾಣುತ್ತಿಲ್ಲ. ಪ್ರಜಾಸತ್ತಾತ್ಮಕ ಚಳುವಳಿಯಿಂದ ದಿನೇ ದಿನೇ ದೂರ ತಳ್ಳಲ್ಪಡುತ್ತಿರುವ ಕಾಂಗ್ರೆಸ್ (ಐ) ಪಕ್ಷ ತನ್ನ ಪ್ರಾಧಾನ್ಯತೆಯನ್ನು ಉಳಿಸಿಕೊಳ್ಳುವ ಒಂದೇ ಉದ್ದೇಶದಿಂದ ಕೇಂದ್ರದ ಜನತಾ (ಎಸ್)-ಕಾಂಗ್ರೆಸ್ ಸಮ್ಮಿಶ್ರ ಸರಕಾರಕ್ಕೂ ಬಿಹಾರ್‌ನ ಆರೆಸ್ಸೆಸ್ ನಿಯಂತ್ರಿತ ರಾಮಸುಂದರದಾಸ್ ಸಂಪುಟಕ್ಕೂ ಬೇರೆ ಬೇರೆ ರಾಜ್ಯಗಳಲ್ಲಿನ ಯಾವುದೇ ಕೂಟಕ್ಕಾದರೂ ನಿಶ್ಶರ್ತ ಬೆಂಬಲ ನೀಡಲು ಮುಂದಾಗುತ್ತಿದೆಯೆಂಬುದನ್ನು ಸಿ. ಪಿ. ಐ. ಗಮನಿಸಿದಂತಿಲ್ಲ.

ಕಾಂಗ್ರೆಸ್ (ಐ) ಪ್ರತಿನಿಧಿಸುತ್ತಿರುವ ಸರ್ವಾಧಿಕಾರಿ ಶಕ್ತಿಗಳನ್ನು ಜನಸಂಘ ಆರ್.ಎಸ್.ಎಸ್.ಗಳು ಪ್ರತಿನಿಧಿಸುವ ಕೋಮುವಾದಿ ಶಕ್ತಿಗಳನ್ನೂ ಒಟ್ಟಿಗೇ ವಿರೋಧಿಸಿ ಹೋರಾಡುವುದಾಗಿ ಕಳೆದ ಮೇ 17 ರಂದು ಇತರ ಹಲವಾರು ವ್ಯಕ್ತಿಗಳು ಮತ್ತು ಗುಂಪುಗಳ ಜೊತೆಗೆ ನಾವು ಕೈಗೊಂಡಿದ್ದ ಪ್ರತಿಜ್ಞೆಯನ್ನು ಇದೀಗ ಸಿ. ಪಿ. ಐ. ಯ ಸ್ಮರಣೆಗೆ ತರಲು ಬಯಸುತ್ತೇವೆ, ನಮ್ಮಲ್ಲಿ ವಿಚಾರ ವಿನಿಮಯಗಳು ನಡೆದ ಬಳಿಕ ದೇಶದಲ್ಲಿ ಕಾಣಿಸಿಕೊಂಡ ಕೆಲವೊಂದು ವಿದ್ಯಮಾನಗಳು-ಮುಖ್ಯವಾಗಿ ದೇವರಾಜ ಅರಸ್ ಅವರ ನೇತೃತ್ವದಲ್ಲಿ ಗಣನೀಯ ಸಂಖ್ಯೆಯ ಕಾಂಗ್ರೆಸ್(ಐ) ಸದಸ್ಯರೂ, ಮುಂದಾಳುಗಳೂ ತಮ್ಮ ಪಕ್ಷವನ್ನು ತೊರೆದು ಸ್ವರಣ್‌ಸಿಂಗ್ ಕಾಂಗ್ರೆಸ್ ಮತ್ತಿತರ ಕಾಂಗ್ರೆಸಿಗರ ಜೊತೆಗೆ ಸಹಕಾರ ಬೆಳೆಸಿದುದು, ಜಾರ್ಜ್ ಫರ್ನಾಂಡಿಸ್ ಮುಂದಾಳ್ತನದಲ್ಲಿ ಸೋಶಿಯಲಿಸ್ಟ್ ಪಕ್ಷದ ಮುಖಂಡರು ರಾಜಕೀಯ ಶಕ್ತಿಗಳ ಮರುಹೊಂದಾಣಿಕೆಗಾಗಿ ನಡೆಸಿದ ಪ್ರಯತ್ನ ಮತ್ತು ಅದರ ಫಲವಾಗಿ ಜುಲೈ 7 ಮತ್ತು 8 ರಂದು ನಡೆದ ಸೋಶಿಯಲಿಸ್ಟರ ಸಮಾವೇಶ—ಇತ್ಯಾದಿಗಳೆಲ್ಲ ಸರ್ವಾಧಿಕಾರ ಮತ್ತು ಕೋಮುವಾದದ ವಿರುದ್ಧ ನಾವು ಹೇಳುತ್ತಿರುವಂತಹ ಹೋರಾಟದ ಗತಿಯನ್ನು ತೀವ್ರಗೊಳಿಸಿವೆ.

ಜನತಾಪಕ್ಷದಿಂದ ಅನೇಕ ಮಂತ್ರಿಗಳೂ, ಪಾರ್ಲಿಮೆಂಟ್ ಸದಸ್ಯರೂ ಮತ್ತಿತರ ಮುಂದಾಳುಗಳೂ ಹೊರಬಂದು ಆರೆಸ್ಸೆಸ್ ವಿರೋಧಿಗಳ ಬಣವನ್ನು ಸೇರಿದುದನ್ನು ನಾವು ಸ್ವಾಭಾವಿಕವಾಗಿಯೇ ಸ್ವಾಗತಿಸಿದ್ದೇವೆ. ಮೊರಾರ್ಜಿ ಸಂಪುಟದ ಪತನವಾದದ್ದೂ ಇನ್ನೊಂದು ಸರಕಾರವನ್ನು ರಚಿಸಲು ದೇಸಾಯಿಗೆ ಸಾಧ್ಯವಾಗದೇ ಹೋದದ್ದೂ ಮೇಲೆ ಹೇಳಿರುವ ಬೆಳವಣಿಗೆಗಳ ಸಹಜ ಫಲಶ್ರುತಿ.

ಎರಡು ದುಷ್ಟ ಶಕ್ತಿಗಳು :

ಮೊರಾರ್ಜಿ ದೇಸಾಯಿ ಪ್ರಧಾನಿ ಪದಕ್ಕೆ ರಾಜೀನಾಮೆ ಕೊಟ್ಟ ಬಳಿಕ ಸಿ. ಪಿ. ಐ. ಮುಂದಾಳುಗಳು ಮೊರಾರ್ಜಿ ಮತ್ತೊಮ್ಮೆ ಈ ಸರಕಾರ ರಚಿಸುವುದನ್ನು ಹೇಗಾದರೂ ತಪ್ಪಿಸಲೇಬೇಕಾದುದು ಅಗತ್ಯವೆಂಬ ನಿಲುಮೆಯನ್ನು ತಳೆದರು. ಹೊಸದಾಗಿ ರಚಿಸಲ್ಪಡುವ ಸರಕಾರವು ಕಾಂಗ್ರೆಸ್ (ಐ) ಅಥವಾ ಆರೆಸ್ಸೆಸ್-ಜನಸಂಘ ಕೂಟಗಳಲ್ಲಿ ಯಾವುದರ ಮೇಲೂ ಅವಲಂಬಿಸಿಕೊಂಡಿರಬಾರದು ಎಂಬ ಸಿ. ಪಿ. ಐ. (ಎಂ)ನ ಅಭಿಪ್ರಾಯವನ್ನು ಒಪ್ಪದೆ ಸಿ. ಪಿ. ಐ. ಮುಂದಾಳುತ್ವ ಚರಣಸಿಂಗರ ಸರಕಾರ ರಚನೆಗೆ ಬೆಂಬಲ ನೀಡಿತು. ಚರಣ್ ಸಿಂಗ್ ಅವರಿಗೆ ಕಾಂಗ್ರೆಸ್(ಐ)ನಿಶ್ಶರ್ತ ಬೆಂಬಲ ನೀಡಿದ ಮೇಲೆ, ಜನತಾ (ಎಸ್) ಪಕ್ಷದ ಅಧ್ಯಕ್ಷ ರಾಜನಾರಾಯಣ್ ಅವರು ತಮ್ಮ ಪಕ್ಷವು "ಮೊರಾರ್ಜಿದೇಸಾಯಿಗಿಂತ ಇಂದಿರಾಗಾಂಧಿ ಉತ್ತಮ ಎಂದೇ ಪರಿಗಣಿಸುತ್ತದೆ" ಎಂಬುದಾಗಿ ಸಾರಿದ ಬಳಿಕ ಸಿ ಪಿ.ಐ. ಚರಣ್ ಅವರಿಗೆ ಬೆಂಬಲ ನೀಡಿತು ಎಂಬುದನ್ನು ಗಮನಿಸಬೇಕು.

ಮೇ. 17 ರಂದು ಸಿ.ಪಿ.ಐ. ಇತರ ಸರ್ವಾಧಿಕಾರವಿರೋಧಿ ಮತ್ತು ಜಾತ್ಯತೀತ ಶಕ್ತಿಗಳು ಒಂದಾಗಿ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಮತ್ತು ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸುವೆವೆಂದು ಪ್ರತಿಜ್ಞೆ ಮಾಡಿದ ಮೇಲೂ ಈ ಎರಡು ದುಷ್ಟಕೂಟಗಳಲ್ಲಿ ಸಿ ಪಿ.ಐ. ಒಂದನ್ನು ಆರಿಸಿಕೊಂಡಿತೆಂದರೆ ಅದು ತಾನು ಮಾಡಿದ ಪ್ರತಿಜ್ಞೆಯಿಂದ ಹಿಂದೆ ಸರಿದಂತೆ ಎನ್ನುವುದು ನಿರ್ವಿವಾದ. ಭೂಪೇಶ ಗುಪ್ತರ ಲೇಖನ ಮತ್ತು 'ನ್ಯೂ ಏಜ್'ನಲ್ಲಿ ಪ್ರಕಟವಾದ ಎರಡು ಹೇಳಿಕೆಗಳ ಮೇಲಿಂದ ಆರ್.ಎಸ್.ಎಸ್. ಮತ್ತು ಕಾಂಗ್ರೆಸ್ (ಐ)ಇವುಗಳಲ್ಲಿ ಯಾವುದಾದರೂ ಒಂದನ್ನು ಆರಿಸಬೇಕೆಂದೂ, ಮತ್ತು ಇವೆರಡರಲ್ಲಿ ಕಾಂಗ್ರೆಸ್ (ಐ) ಯೇ ಸ್ವೀಕಾರಾರ್ಹವೆಂದೂ ಹೇಳುವ ರಾಜ್‌ನಾರಾಯಣ ಅವರ ಅಭಿಪ್ರಾಯವನ್ನು ಸಿ ಪಿ.ಐ. ಒಪ್ಪಿರುವಂತೆ ಕಾಣುತ್ತದೆ.

ಆದರೆ ಈ ನೀತಿ, ಸಿ.ಪಿ ಐ. ತಾನೇ ಹೇಳಿಕೊಂಡಿರುವಂತಹ ಉದ್ದೇಶವನ್ನು ಅಂದರೆ ಆರೆಸ್ಸೆಸ್ ಮತ್ತು ಜನಸಂಘದ ನಿಯಂತ್ರಣದಲ್ಲಿರುವ ಜನತಾಪಕ್ಷ ಅಧಿಕಾರಕ್ಕೆ ಮರಳಿ ಬರುವುದನ್ನು ತಡೆಗಟ್ಟುವುದನ್ನು ಕೂಡಾ ಸಾಧಿಸಿಕೊಳ್ಳಲು ಸಹಕಾರಿಯಾಗುವುದಿಲ್ಲವೆನ್ನುವುದು ಬಿಹಾರ್‌ನಲ್ಲಿ ನಡೆದ ಘಟನೆಗಳಿಂದ ಸ್ಪಷ್ಟವಾಗಿದೆ. ಬಿಹಾರ್‌ರಾಜ್ಯದಲ್ಲಿ ಸಿ. ಪಿ.ಐ, ಸಿ.ಪಿ.ಐ.(ಎಂ)ಕರ್ಪೂರಿಠಾಕುರ್ ನೇತೃತ್ವದ ಜನತಾ (ಎಸ್) ಮತ್ತಿತರರು ಸೇರಿ ಆರೆಸ್ಸೆಸ್-ಜನಸಂಘದ ಅಂಕೆಯೊಳಗಿರುವ ಸಂಪುಟದ ವಿರುದ್ಧ ಅವಿಶ್ವಾಸ ಗೊತ್ತುವಳಿಯೊಂದನ್ನು ತಂದಿದ್ದರು. ಕಾಂಗ್ರೆಸ್(ಐ)ನ ಆರೆಸ್ಸೆಸ್-ವಿರೋಧಿ ನಿಲುಮೆಯ ಮೇಲೆ ವಿಶ್ವಾಸವಿರುವ ಮಂದಿಗೆ ಆಶ್ಚರ್ಯವಾಗುವಂತೆ ಬಿಹಾರ್‌ನ ಕಾಂಗ್ರೆಸ್(ಐ) ಮುಂದಾಳುಗಳು ಈ ಅವಿಶ್ವಾಸ ನಿರ್ಣಯವನ್ನು ಬೆಂಬಲಿಸಲು ಒಪ್ಪದಿದ್ದುದು ಮಾತ್ರವಲ್ಲ, ಗೊತ್ತುವಳಿಯ ವಿರುದ್ಧ ಅಂದರೆ ಆರೆಸ್ಸೆಸ್-ಜನಸಂಘದ ಅಂಕೆಯಲ್ಲಿರುವ ಸರಕಾರದ ಪರವಾಗಿ ಮತ ಚಲಾಯಿಸಿದರು. ಕೇಂದ್ರದಲ್ಲೂ ಇಂತಹ ಬೆಳವಣಿಗೆ ಪುನರಾವರ್ತನೆಯಾಗುವುದಿಲ್ಲವೆಂದು ಹೇಳಲು ಸಾಧ್ಯವಿದೆಯೆ? ಕಾಂಗ್ರೆಸ್(ಐ) ಮತ್ತು ಜನತಾ(ಆರೆಸ್ಸೆಸ್ ಜನಸಂಘಗಳ ಕಪಿಮುಷ್ಟಿಯಲ್ಲಿರುವ ಜಗಜೀವನರಾವ್ ಅವರ ಜನತಾ) ಕೇಂದ್ರದಲ್ಲಿ ಒಂದಾಗಲಾರವೇ? ಇಂತಹ ಸಾಧ್ಯತೆಯೊಂದನ್ನು ಜಗಜೀವನರಾವ್ ಬಹಿರಂಗವಾಗಿಯೇ ಸ್ವಾಗತಿಸಿದ್ದರಲ್ಲ!

ವಿಚಿತ್ರವಾದ ತರ್ಕ :

ಸರ್ವಾಧಿಕಾರವನ್ನು ಕೋಮುವಾದದ ನೆರವಿನಿಂದ ಸೋಲಿಸಲು ಸಾಧ್ಯವಿಲ್ಲ ಮತ್ತು ಕೋಮುವಾದದ ವಿರುದ್ಧ ಸರ್ವಾಧಿಕಾರಿ ಶಕ್ತಿಗಳ ಸಹಾಯ ಪಡೆದು ಹೋರಾಡುವುದೂ ಅಷ್ಟೇ ಅಸಾಧ್ಯವೆನ್ನುವುದು ಮೇ 17ರ ನಮ್ಮ ಮಾತುಕತೆಗಳಲ್ಲಿ ಕಂಡುಬಂದ ಒಮ್ಮತದ ಅಭಿಪ್ರಾಯ. ಸಿ.ಪಿ.ಐ. ಮುಂದಾಳುಗಳು ಈ ಒಮ್ಮತದ ಅಭಿಪ್ರಾಯವನ್ನೇ ತಿರಸ್ಕರಿಸುತ್ತಿದ್ದಾರೆ.

ಕಾಂಗ್ರೆಸ್(ಐ)ನ 'ನಿಶ್ಶರ್ತ'ಬೆಂಬಲದೊಡನೆ ಚರಣ್‌ಸಿಂಗ್ ಸರಕಾರ ರಚಿಸುವ ಹವಣಿಕೆಯಲ್ಲಿದ್ದಾಗ ಚರಣ್‌ಗೆ ಬೆಂಬಲಸಾರಿ ತನ್ನ ಸದಸ್ಯರ ಪಟ್ಟಿಯನ್ನು ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿಕೊಟ್ಟ ಸಿ. ಪಿ. ಐ. ನ ವರ್ತನೆಯನ್ನು ಸಮರ್ಥಿಸಿಕೊಳ್ಳಲು ಭೂಪೇಶಗುಪ್ತಾ ತನ್ನ ಲೇಖನದಲ್ಲಿ ತುಂಬಾ ಹೆಣಗಾಡಿದ್ದಾರೆ. ಸಿ. ಪಿ. ಐ. ಮತ್ತು ರೈತ ಕಾರ್ಮಿಕ ಪಕ್ಷದ(Peasants and Workers party) ಅವರ ಗೆಳೆಯರು ಚರಣ್‌ಗೆ ಬೆಂಬಲ ಸಾರಿ ತಮ್ಮ ಹೆಸರನ್ನು ಕೊಡದಿರುತ್ತಿದ್ದರೆ ಮೊರಾರ್ಜಿದೇಸಾಯಿ ಇನ್ನೊಂದು ಸರಕಾರವನ್ನು ರಚಿಸುತ್ತಿದ್ದರು ಮತ್ತು ಇದಕ್ಕಿಂತ ದೊಡ್ಡ ಗಂಡಾಂತರ ಬೇರೆ ಇಲ್ಲ ಎನ್ನುವುದೇ ಭೂಪೇಶ ಗುಪ್ತರ ತರ್ಕದ ತಿರುಳು.

ಎಡ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರೀಯ ಬದಲಿ ಶಕ್ತಿಯ ರಚನೆಯನ್ನು ತಮ್ಮ ಕಾರ್ಯಕ್ರಮದಲ್ಲಿ ಹೊಂದಿರುವ ಪಕ್ಷವೊಂದು ಇಂತಹ ವಾದವನ್ನು ಮುಂದೊಡ್ಡುತ್ತಿರುವುದು ಬಹು ವಿಚಿತ್ರ. ಅವರು ಹೇಳಿಕೊಳ್ಳುತ್ತಿರುವ 'ರಾಷ್ಟ್ರೀಯ ಬದಲಿ ಶಕ್ತಿ'ಯೆಂದರೆ ಕೋಮುವಾದದ ಬದಲು ಸರ್ವಾಧಿಕಾರವನ್ನು ಬಯಸುವುದೇ? ರಾಜ್‌ನಾರಾಯಣ್ ಹೇಳುವಂತೆ ಮೊರಾರ್ಜಿದೇಸಾಯಿಗಿಂತ ಇಂದಿರಾ ಗಾಂಧಿ ಉತ್ತಮವೆಂದು ಅರ್ಥವೇ?

ನಮ್ಮ ಕಾರ್ಯಕ್ರಮದಲ್ಲಿ ಇರಬೇಕಾದುದು ರಾಷ್ಟ್ರೀಯ ಮಟ್ಟದ ಸರ್ವಾಧಿಕಾರ ವಿರೋಧಿ, ಜಾತ್ಯತೀತ ಬದಲಿ ಶಕ್ತಿಯೊಂದರ ರಚನೆಯೆನ್ನುವುದು ಸಿ.ಪಿ.ಐ. (ಎಂ) ಈ ಹಿಂದೆ ಮತ್ತು ಈಗಲೂ ತಳೆದಿರುವ ನಿಲುಮೆ. ಇದಕ್ಕೆ ಸಿ.ಪಿ.ಐ. (ಎಂ) ನ್ನೂ ಸೇರಿದಂತೆ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಹೊಂದಾಣಿಕೆ ಹಾಗೂ ಐಕ್ಯ ತೀರಾ ಅಗತ್ಯ. ಸರ್ವಾಧಿಕಾರವನ್ನೂ ಕೋಮುವಾದವನ್ನೂ ವಿರೋಧಿಸಿ ಹೋರಾಡಲು ಸಿದ್ಧರಿರುವ ಪ್ರತಿಯೊಬ್ಬರನ್ನೂ ಒಳಗೊಳ್ಳುವ ಈ ಒಕ್ಕೂಟವು ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ಐಕ್ಯರಂಗಕ್ಕಿಂತಲೂ ಹೆಚ್ಚು ವಿಸ್ತಾರವಾದದ್ದು.

ಕಾರ್ಯಕ್ರಮದಲ್ಲಿರುವ 'ಬದಲಿ ಶಕ್ತಿ':

ಎಡ ಮತ್ತು ಪ್ರಜಾಪ್ರಭುತ್ವವಾದಿ ಒಂದೆಡೆ ಸರ್ವಾಧಿಕಾರವನ್ನು ವಿರೋಧಿಸುವ ಮತ್ತೊಂದೆಡೆ ಕೋಮುವಾದವನ್ನೂ ವಿರೋಧಿಸುವ ತತ್ವಬದ್ಧವಾದ ದೃಢ ನಿಲುಮೆಯನ್ನು ತಳೆದರೆ ಅದು ಆರೆಸ್ಸೆಸ್‌ನ ನಿಯಂತ್ರಣದಲ್ಲಿರುವ ಜನತಾಪಕ್ಷದೊಳಗೂ ಈಗಲೂ ಇರುವಂತಹ ಸರ್ವಾಧಿಕಾರ ವಿರೋಧಿ ಹಾಗೂ ಜಾತ್ಯತೀತ ಶಕ್ತಿಗಳನ್ನು ಒಂದುಗೂಡಿಸಲು ನೆರವಾಗುವುದು. ಆರೆಸ್ಸೆಸ್ ಮತ್ತು ಜನತಾಪಕ್ಷಗಳನ್ನು ಪರಸ್ಪರರಿಂದ ಬೇರ್ಪಡಿಸುವುದೆಂದು ಹೇಳಲಾಗಿರುವ ಜನತಾ ರಾಷ್ಟ್ರೀಯ ಕಾರ್ಯಕಾರಿಣಿಯ ನಿರ್ಣಯದಿಂದ ತೃಪ್ತರಾಗದ ಅನೇಕ ಜನತಾ ಸದಸ್ಯರು ತಮ್ಮ ಪಕ್ಷದೊಳಗೇ ತೋರಿಸುತ್ತಿರುವ ತೀವ್ರ ಪ್ರತಿರೋಧವೇ ಇದಕ್ಕೊಂದು ನಿದರ್ಶನ.

ಸಿ. ಪಿ. ಐ. (ಎಂ) ಮತ್ತಿತರ ಎಡ ಪಕ್ಷಗಳೂ ಬಣಗಳೂ ಇದೀಗ ರಚಿಸಲ್ಪಡುತ್ತಿರುವ ಸರಕಾರವು ಕಾಂಗ್ರೆಸ್ (ಐ) ನ ಮೇಲಾಗಲೀ ಆರೆಸ್ಸೆಸ್‌ನ ಮೇಲಾಗಲೀ ಅವಲಂಬಿಸಿಕೊಂಡಿರಲೇಬಾರದು ಎಂಬ ನಿಲುಮೆಗೆ ದೃಢವಾಗಿ ಅಂಟಿಕೊಂಡಲ್ಲಿ ಎಲ್ಲ ಪಕ್ಷಗಳಲ್ಲೂ ಇರುವ ಸರ್ವಾಧಿಕಾರ ವಿರೋಧಿ ಮತ್ತು ಜಾತ್ಯತೀತ ಶಕ್ತಿಗಳನ್ನು ಒಂದುಗೂಡಿಸಲು ಸಾಧ್ಯ. ಇಷ್ಟಕ್ಕೂ ಲೋಕ ಸಭೆಯ 539 ಸದಸ್ಯರಲ್ಲಿ ಕಾಂಗ್ರೆಸ್ (ಐ) ಮತ್ತು ಆರೆಸ್ಸೆಸ್ ಒಟ್ಟು ಬಲ 160 ಮಾತ್ರ. ಎಲ್ಲಾ ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳು ಒಂದಾಗಿ ಒತ್ತಡ ಹೇರಿದರೆ ಕಾಂಗ್ರೆಸ್ (ಐ) ಪ್ರತಿನಿಧಿಸುತ್ತಿರುವ ಸರ್ವಾಧಿಕಾರಿ ಶಕ್ತಿಗಳ ಮೇಲೆ ಈಗಿನ ಜನತಾ

[6ನೇ ಪುಟ ನೋಡಿ]

ತಮಿಳುನಾಡು

ಹತ್ತಿಗಿರಣಿ ಕಾರ್ಮಿಕರು ಕಂಡ ಸತ್ಯ

ತಮಿಳುನಾಡಿನಲ್ಲಿ ಹತ್ತಿಗಿರಣಿಗಳು ಪ್ರಾರಂಭವಾದ ಕಾಲದಿಂದಲೂ, ಈಚೆಗೆ ನಡೆದ ಹೋರಾಟದಂತಹ ಒಂದು ಉಗ್ರ ಹೋರಾಟ ನಡೆದಿಲ್ಲವೆನ್ನಬಹುದು. 1948, 1972, ಮತ್ತು 1974 ರಲ್ಲಿ ನಡೆದ ಸಾರ್ವತ್ರಿಕ ಮುಷ್ಕರಗಳ ಸಮಯದಲ್ಲಿ ಸಹಾ ಇಂತಹ ಐಕ್ಯತೆ ಕಂಡು ಬಂದಿರಲಿಲ್ಲ.

ಕನ್ಯಾಕುಮಾರಿಯಿಂದ, ಮದರಾಸಿನ ಬಿ. ಅಂಡ್ ಸಿ. ಮಿಲ್‌ತನಕ ವ್ಯಾಪಿಸಿದ, 55 ದಿನಗಳ ಹೋರಾಟ, ಕೊನೆಯವರೆಗೂ ಕಾರ್ಮಿಕರ ನಿರ್ಧಾರವನ್ನು ಸಡಲಿಸಲಿಲ್ಲ. ಬದಲು, ಪೋಲೀಸರ ದಬ್ಬಾಳಿಕೆ, ಮಾಲೀಕರ ಹಟಮಾರಿತನ, ರಾಜ್ಯ ಸರಕಾರದ ನಿರ್ಲಕ್ಷ್ಯ, ಹಾಗೂ ಇಂಟಕ್‌ನವರ ದ್ರೋಹ ಕಾರ್ಮಿಕರನ್ನು ದೃಢವಾಗಿ ನಿಲ್ಲುವಂತೆ ಮಾಡಿತು.

ಸಿ. ಐ. ಟಿ. ಯು. ನಾಯಕತ್ವ:

ಇಂದಿರಾಗಾಂಧಿಯವರ 19 ತಿಂಗಳ ತುರ್ತುಪರಿಸ್ಥಿತಿ ಸಮಯದಲ್ಲಿ, ತುಟ್ಟಿಭತ್ಯ ಹಾಗೂ ಬೋನಸ್ಸನ್ನು ಕಳೆದುಕೊಂಡ ಕಾರ್ಮಿಕರು, ಪ್ರಜಾಸತ್ತಾತ್ಮಕ ಹಕ್ಕುಗಳು ಮರಳಿ ದೊರೆತ ಕೂಡಲೇ ಜಾಗೃತರಾದರು, ತುರ್ತು ಪರಿಸ್ಥಿತಿಯಲ್ಲಿ ಕೆಲಸ ಜಾಸ್ತಿ ಮಾಡಿ, ಸೌಲಭ್ಯಗಳನ್ನು ಕಸಿದುಕೊಂಡು, ಅಪಾರ ಲಾಭವನ್ನು ಕೊಳ್ಳೆ ಹೊಡೆದಿದ್ದ ಮಾಲೀಕರಿಗೆ ಬುದ್ಧಿ ಕಲಿಸಲು ನಿರ್ಧರಿಸಿದರು. ಸಿ. ಐ. ಟಿ. ಯು. ನಾಯಕತ್ವವು, ತಮಿಳುನಾಡು ಪ್ರಾಂತ್ಯದ ಹತ್ತಿಗಿರಣಿ ಕಾರ್ಮಿಕರ ಪ್ರತಿನಿಧಿಗಳ ಸಭೆಯನ್ನು ಸೇರಿಸಿ, ಸಂಬಳ, ತುಟ್ಟಿಭತ್ಯ ಮತ್ತಿತರ ಬೇಡಿಕೆಗಳನ್ನು ಮುಂದಿಟ್ಟು ಚಳುವಳಿ ಪ್ರಾರಂಭಿಸಿದರು.

ಜೊತೆಗೆ ಐಕ್ಯ ಹೋರಾಟಕ್ಕಾಗಿ ಮಿತ್ರ ಸಂಘಟನೆಗಳಿಗೆ ಕರೆಕೊಟ್ಟರು. ಕರೆನೀಡಿದ ಮೂರು ತಿಂಗಳ ನಂತರ ಹೋರಾಟಸಮಿತಿ ರಚನೆಯಾಗಿ, ಚಳುವಳಿ ಹೊಸ ಹುರುಪಿನಿಂದ ಪ್ರಾರಂಭವಾಯಿತು. ಆದರೆ, ಕಾರ್ಮಿಕರ ಪ್ರತಿನಿಧಿಗಳು ಮುಂದಿಟ್ಟ ಬೇಡಿಕೆಗಳನ್ನು ಪರಿಶೀಲಿಸಲು ಸಹಾ ಮಾಲೀಕರು ನಿರಾಕರಿಸಿದರು. ಕಾರ್ಮಿಕರೊಂದಿಗೆ ಮಾತನಾಡಲು ನಿರಾಕರಿಸಿದ ಮಾಲೀಕರು, "ನೀವು ಆಕಾಶದಲ್ಲಿ ನಿಂತು ಮಾತನಾಡುತ್ತೀರಿ, ಕೆಳಗಿಳಿದು ಬನ್ನಿರಿ ಅದುವರೆಗೂ ನಾವು ಮಾತನಾಡಲು ತಯಾರಿಲ್ಲ" ಎಂದು ಹಟಮಾರಿತನದ ಉತ್ತರ ಕೊಟ್ಟರು.

ಏಪ್ರಿಲ್ ತಿಂಗಳಲ್ಲಿ, ಕೊಯಮುತ್ತೂರಿನಲ್ಲಿ ಸೇರಿದ ಹತ್ತಿಗಿರಣಿ ಕಾರ್ಮಿಕರ ರಾಜ್ಯ ಮಟ್ಟದ ಪ್ರತಿನಿಧಿಗಳ ಸಮ್ಮೇಳನ ಬೇಡಿಕೆಗಳನ್ನು ಮಾಲೀಕರ ಮುಂದಿಟ್ಟು ಒಂದು ತಿಂಗಳ ಒಳಗಾಗಿ ಬೇಡಿಕೆಗಳನ್ನು ಈಡೇರಿಸದಿದ್ದರೆ, ತಾ.25-5-79 ರಿಂದ ರಾಜ್ಯಾದ್ಯಂತ ಸಾರ್ವತ್ರಿಕ ಮುಷ್ಕರವನ್ನು ಆಚರಿಸುವುದೆಂದು ತಿಳಿಸಿತು. ಆದರೂ, ಅನೇಕ ನಾಯಕರಿಗೆ ದಕ್ಷಿಣ ಜಿಲ್ಲೆಗಳಲ್ಲಿ ಹೋರಾಟ ಯಶಸ್ವಿಯಾಗುವ ಸಂಶಯವಿತ್ತು. ಎಲ್ಲರ ನಿರೀಕ್ಷೆಗಳನ್ನೂ ಮೀರಿಸಿ, ಒಂದು ಲಕ್ಷ ನಲವತ್ತೈದು ಸಾವಿರ ಕಾರ್ಮಿಕರನ್ನು ಒಳಗೊಂಡ 180 ಕಾರ್ಖಾನೆಗಳು ಮುಚ್ಚಲ್ಪಟ್ಟವು. ದಿನಕ್ಕೆ ಎರಡು ಕೋಟಿ ರೂಪಾಯಿ ಉತ್ಪಾದನೆ ನಿಂತಿತು.

ಒಂದೂವರೆ ಲಕ್ಷ ಕಾರ್ಮಿಕರ ಬೇಡಿಕೆಗಳನ್ನು ಇತ್ಯರ್ಥಪಡಿಸಲು ಸರಕಾರ ಮಧ್ಯೆ ಪ್ರವೇಶಿಸಬೇಕೆಂದು ಕಾರ್ಮಿಕ ಸಂಘಗಳ ಜಂಟಿ ಕ್ರಿಯಾ ಸಮಿತಿ ಮುಖ್ಯ ಮಂತ್ರಿಯವರಿಗೆ ಮನವಿ ಮಾಡಿತು. ಇದಕ್ಕೆ ಮಾನ್ಯತೆ ನೀಡಿ ಕಾರ್ಮಿಕ ಇಲಾಖೆ ಅಧಿಕಾರಿಗಳು ಎರಡು ಬಾರಿ ಮಾತುಕತೆಗಳನ್ನು ನಡೆಸಲು ಪ್ರಯತ್ನಿಸಿದರು, ಆದರೆ ಮಾಲೀಕರು ಮಾತುಕತೆಗೆ ಬರಲಿಲ್ಲ. ಕೊನೆಯಲ್ಲಿ ಕಾರ್ಮಿಕ ಇಲಾಖೆ ಸಚಿವರು ಮೇ ತಿಂಗಳು 28 ಮತ್ತು 29 ನೇ ತಾರೀಖಿನಂದು ಎರಡು ಕಡೆಯುವರನ್ನು ಸೇರಿಸಿ ಮಾತುಕತೆ ನಡೆಸಿದರು.

ಆದರೆ ಮಾತುಕತೆ ಮಾಲೀಕರಿಗೆ ಅನುಕೂಲವಾಗುವ ರೀತಿಯಲ್ಲಿ ಹೊರಟಿದ್ದನ್ನು ಕಂಡು ಸಿ. ಐ. ಟಿ. ಯು. ಮುಖಂಡರು ಸಚಿವರ ಧೋರಣೆಯನ್ನು ವಿರೋಧಿಸಿದರು. ಇದನ್ನೇ ಮುಂದಿಟ್ಟುಕೊಂಡು ಕಾರ್ಮಿಕ ಸಚಿವರು, "ಸಿ. ಐ. ಟಿ. ಯು. ಮುಖಂಡರಿಗೆ ನನ್ನ ಮೇಲೆ ನಂಬಿಕೆಯಿಲ್ಲ, ಇದನ್ನು ನೀವು ಒಪ್ಪುತ್ತೀರಾ? ಎಂದು ಕೇಳಿದರಲ್ಲದೆ, ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಕಡಿಮೆ ಮಾಡಿಕೊಂಡು, ಮಾತುಕತೆಗೆ ಸಹಾಯ ಮಾಡಬೇಕು. ನಿಮ್ಮ ಧೋರಣೆಯಲ್ಲಿ ಬದಲಾವಣೆಯಾದರೆ, ಬಾಗಿಲು ನಿಮಗಾಗಿ ತೆರೆದಿರುತ್ತೆ, ಇಲ್ಲವಾದರೆ ನಿಮಗೆ ತೋಚಿದಂತೆ ಮಾಡಿ" ಎಂದು ದಾಕ್ಷಿಣ್ಯವಿಲ್ಲದೆ ಮಾತನಾಡಿದರು. ಕಾರ್ಮಿಕರಸಂಘಟನೆಯನ್ನು ಒಡೆಯಲುಹಾಗೂ ಸಿ. ಐ. ಟಿ. ಯು. ವನ್ನು ಪ್ರತ್ಯೇಕಿಸಲು ಯತ್ನಿಸಿದರು. ಇದೇ ವೇಳೆ ರಾಜ್ಯದ ಮುಖ್ಯಮಂತ್ರಿ ಎಂ. ಜಿ. ರಾಮಚಂದ್ರನ್, ಮಾಲೀಕರಿಗೆ ಅನುಕೂಲವಾಗುವಂತೆ, "ಪಕ್ಷದ ರಾಜ್ಯಗಳಿಗಿಂತ ನಮ್ಮ ರಾಜ್ಯದ ಹತ್ತಿಗಿರಣಿ ಕಾರ್ಮಿಕರು ಹೆಚ್ಚಿನ ವೇತನ ಪಡೆಯುತ್ತಿದ್ದಾರೆ" ಎಂಬ ಹೇಳಿಕೆ ನೀಡಿದರು. ಇದರಿಂದ ಉತ್ಸಾಹಗೊಂಡ ಮಾಲೀಕರು, ಯಾವ ಬೇಡಿಕೆಗಳನ್ನೂ ಕೇಳಲು ತಾವು ತಯಾರಿಲ್ಲವೆಂಬ ರೀತಿಯಲ್ಲಿ ಮಾತುಕತೆ ಮಾಡಲು ಪ್ರಾರಂಭಿಸಿದರು.

ಮುಷ್ಕರ ಪ್ರಾರಂಭವಾಗಿ ಒಂದು ತಿಂಗಳ ಮೇಲಾದರೂ, ಮಾಲೀಕರು ಬಗ್ಗಲಿಲ್ಲ. ಕಾರ್ಮಿಕರು ಜಗ್ಗಲಿಲ್ಲ. ಕಾರ್ಮಿಕರ ವಸತಿಗಳು, ನಿರಾಶ್ರಿತರ ಕಾಲೋನಿಗಳಂತೆ ಕಾಣುತ್ತಿದ್ದವು. ದುಡಿಯುವ ವರ್ಗದ ನಿರ್ಧಾರವನ್ನು ಪುಡಿ ಮಾಡಲು, ಸಾಹುಕಾರರ ಏಜಂಟರು ಹಾಗೂ ಪತ್ರಿಕೆಗಳು ಅಪಪ್ರಚಾರದ ಮೂಲಕ, ಸರಕಾರ ಹೇಳುವಂತೆ ಒಪ್ಪಂದ ಮಾಡಿಕೊಳ್ಳುವುದೇ ಒಳ್ಳೆಯದೆಂದು ಪ್ರಚಾರ ಮಾಡಲಾರಂಭಿಸಿದರು. ಈ ಎಲ್ಲಾ ಕುತಂತ್ರಗಳನ್ನು ಬಯಲು ಮಾಡಿದ ಸಿ. ಐ. ಟಿ. ಯು. ನಾಯಕತ್ವ ಕಾರ್ಮಿಕರಿಗೆ ಎಚ್ಚರಿಕೆ ನೀಡಿತು.

ತಾ. 28-6-79 ರಿಂದ ಪ್ರಾರಂಭವಾದ ಧರಣೆ ಮುಷ್ಕರದಲ್ಲಿ, ದಿನಕ್ಕೆ ನೂರಾರು ಸ್ವಯಂ ಸೇವಕರು ಜೈಲಿಗೆ ಹೋದರು.

ಐ. ಎನ್. ಟಿ. ಯು. ಸಿ. ನಾಯಕತ್ವದ ದ್ರೋಹ:

ಧರಣೆ ಮುಷ್ಕರವನ್ನು ಪ್ರಾರಂಭಿಸಲು ಹೋರಾಟ ಸಮಿತಿ ನಿರ್ಧರಿಸಿದ ನಂತರ, ಐ. ಎನ್. ಟಿ. ಯು. ಸಿ. ನಾಯಕರು ಮುಷ್ಕರದಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದರು. ಅಷ್ಟೇ ಸಾಲದೆಂದು, ಹೋರಾಟವನ್ನು ಛಿದ್ರಗೊಳಿಸಲು ಕಾರ್ಮಿಕ ದ್ರೋಹಿಗಳನ್ನು ಗುಂಪು ಸೇರಿಸಿ ಬೀದಿಗಿಳಿದರು, ಮಧುರಾ ಕೋಟ್ಸ್ ಮಿಲ್‌ನಲ್ಲಿ ಮುಂಗಡ ಹಣವೆಂಬ ಹೆಸರಿನಲ್ಲಿ ಹಣ ಪಡೆದು ಮುಷ್ಕರ ಮುರಿಯಲು ಮುಂದೆ ನಿಂತರು. ಆದರೆ, ಮಧುರೈ ನಗರದ ವೀರ ಕಾರ್ಮಿಕರು, ಪೋಲೀಸರ ಲಾಠಿ ಏಟು, ರೌಡಿಗಳ ದೌರ್ಜನ್ಯ ಮುಂತಾದುವನ್ನು ಎದುರಿಸಿ ದ್ರೋಹಿಗಳನ್ನು ಓಡಿಸಿದರು, ಪಿತೂರಿಯನ್ನು ನುಚ್ಚು ನೂರು ಮಾಡಿದರು. ಮಾಲೀಕರ ಬೆಂಬಲದಿಂದ ಐ. ಎನ್. ಟಿ. ಯು. ಸಿ. ನಾಯಕರು, ಮಧುರೈ, ಪಳನಿ, ಎಡುಲುಮಲ ಪೇಟೆ, ಭವಾನಿ ಮತ್ತು ಸೇಲಂಗಳ ಒಂದೆರಡು ಕಾರ್ಖಾನೆಗಳಲ್ಲಿ ಕೆಲಸ ಪ್ರಾರಂಭಿಸಲು ಯತ್ನಿಸಿ ಸೋತರು. ಒಂದೂವರೆ ಲಕ್ಷ ಕಾರ್ಮಿಕರ ದೃಢ ನಿರ್ಧಾರದ ಮುಂದೆ, ದ್ರೋಹಿಗಳ ಹೀನತನವೆಲ್ಲಾ ಪುಡಿ, ಪುಡಿಯಾಯಿತು. ಇಷ್ಟಾದರೂ, ಐ. ಎನ್. ಟಿ. ಯು. ಸಿ. ಯ ಅನೇಕ ಸಾಮಾನ್ಯ ಕಾರ್ಮಿಕರು ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಸ್ವತಂತ್ರ ಭಾರತದಲ್ಲಿ ಕಾರ್ಮಿಕ ವರ್ಗಕ್ಕೆ ದ್ರೋಹ ಬಗೆಯಲು ಹುಟ್ಟಿರುವ ಐ. ಎನ್. ಟಿ. ಯು.ಸಿ. ತನ್ನ

[7ನೇ ಪುಟ ನೋಡಿ]

....ಸಿ.ಪಿ.ಐ. ಹಿಂದೇಟು

[5ನೇ ಪುಟದಿಂದ]

(ಎಸ್)-ಕಾಂಗ್ರೆಸ್ ಸರಕಾರದ ಅವಲಂಬನೆಯನ್ನು ಮುರಿಯಲು ಸಾಧ್ಯ. ಅಷ್ಟೇ ಅಲ್ಲ, ಆರೆಸ್ಸೆಸ್ ಮೇಲೆ ಆಧರಿಸಿಕೊಂಡಿರುವ ಯಾವುದೇ ಸರಕಾರದ ರಚನೆಯನ್ನು ತಡೆಯುವುದು ಸಾಧ್ಯವಿದೆ.

ಸಂದರ್ಭಸಾಧಕ ನಿಲುವೆಗಳು:

ಈಗಿನ ಲೋಕಸಭೆಯಲ್ಲಿ ವಿವಿಧ ಶಕ್ತಿಗಳ ಮರುಹೊಂದಾಣಿಕೆಯ ಪ್ರಶ್ನೆಯನ್ನು ಬದಿಗಿಟ್ಟು, ಮುಂದೆ ಬರಬಹುದಾದ ಮಧ್ಯಕಾಲೀನ ಚುನಾವಣೆಗಳ ಬಗ್ಗೆ ಹೇಳುವುದಾದರೆ-ಅಲ್ಲಿ ಈ ಕೆಳಗಿನ ಪ್ರಶ್ನೆಗಳು ತುಂಬ ಮಹತ್ವದ್ದಾಗುತ್ತವೆ. ಸಿ. ಪಿ. ಐ. ಯು, ಸಿ. ಪಿ. ಐ. (ಎಂ) ಮತ್ತಿತರ ಎಡ ಪ್ರಜಾಸತ್ತಾತ್ಮಕ ಪಕ್ಷಗಳ ಜತೆಗೂಡಿ ಜನತಾ (ಎಸ್) ಆಗಲಿ, ಕಾಂಗ್ರೆಸ್, ಜನತಾಪಕ್ಷದಲ್ಲಿರುವ ಜನಸಂಘೇತರ ಪಕ್ಷಗಳು ಅಥವಾ ಎ. ಐ. ಎ. ಡಿ. ಎಂ. ಕೆ, ಅಕಾಲಿ, ಮತ್ತು ನ್ಯಾಶನಲ್ ಕಾನ್ಫರೆನ್ಸ್ ನಂತಹ ಪ್ರಾದೇಶಿಕ ಪಕ್ಷಗಳೇ ಆಗಲಿ ಇವುಗಳಲ್ಲಿ ಯಾರೂ ಕಾಂಗ್ರೆಸ್(ಐ) ಅಥವಾ ಆರೆಸ್ಸೆಸ್-ಜನಸಂಘ ಕೂಟದೊಡನೆ ಚುನಾವಣಾ ಮೈತ್ರಿ ಮಾಡಿಕೊಳ್ಳದಂತೆ ತನ್ನ ಪ್ರಭಾವವನ್ನು ಉಪಯೋಗಿಸುವುದೇ? ಅಥವಾ 'ಇಂದಿರಾಗಾಂಧಿ ಕಡಿಮೆ ಅಪಾಯಕಾರಿ,' 'ಆಕೆ ಮೊರಾರ್ಜಿಗಿಂತ ಉತ್ತಮ' ಇತ್ಯಾದಿ ಭೂಪೇಶ ಗುಪ್ತಾ ಅವರು ನ್ಯೂ ಏಜ್‌ನಲ್ಲಿ ಪ್ರತಿಪಾದಿಸಿರುವಂತಹ ಸೂತ್ರಗಳೇ ಮುಂದೆ ರಚಿಸಲ್ಪಡುವ ಚುನಾವಣಾ ಮೈತ್ರಿಗೆ ಆಧಾರವಾಗುವುದೇ?

ಸಿ. ಪಿ. ಐ. ಮುಂದಾಳುಗಳು ಜನತಾಪಕ್ಷ ಸ್ಥಾಪನೆಯಾದಂದಿನಿಂದಲೂ ಸರ್ವಾಧಿಕಾರದ ವಿರುದ್ಧ ನಡೆದ ಹೋರಾಟದಲ್ಲಿ ಅದು ವಹಿಸಿದ ಪಾತ್ರವನ್ನೂ ಕಡೆಗಣಿಸಿ ಅದನ್ನು 'ಪ್ರತಿಗಾಮಿ' ಎಂದು ಟೀಕಿಸುತ್ತಲೇ ಬಂದಿದ್ದಾರೆ. ಇದೀಗ ಆರೆಸ್ಸೆಸ್‌ನ ವಿರುದ್ಧ ಬಂಡೆದ್ದ ಶಕ್ತಿಗಳು ಜನತಾ ಪಕ್ಷದಿಂದ ಪ್ರತ್ಯೇಕಗೊಂಡ ಮೇಲೆ ಸಿ. ಪಿ. ಐ. ಮುಂದಾಳುಗಳು ಸರ್ವಾಧಿಕಾರಿ ಶಕ್ತಿಗಳ ಅಪಾಯದ ಬಗ್ಗೆ ಕಣ್ಣು ಮುಚ್ಚಿಕೊಳ್ಳುತ್ತಿದ್ದಾರೆ. ಸಿ. ಪಿ. ಐ. (ಎಂ) ಮಾತ್ರವೇ ತನ್ನ ತತ್ವನಿಷ್ಠ ಧೋರಣೆಯಿಂದಾಗಿ ಈ ಎರಡೂ ಸಂದರ್ಭಸಾಧಕ ನಿಲುವೆಗಳಿಂದ ಮುಕ್ತವಾಗಿದೆ. ಅದು ಇಡೀ ಜನತಾ ಪಕ್ಷಕ್ಕೇ ಕಪ್ಪುಬಣ್ಣ ಬಳಿಯುತ್ತಿಲ್ಲ; ಅಥವಾ ಕೋಮುವಾದದ ಪಿಡುಗಿನ ವಿರುದ್ಧ ಹೋರಾಡುವ ನೆಪದಲ್ಲಿ ಸರ್ವಾಧಿಕಾರದ ವಿರುದ್ಧ ನಡೆಸಬೇಕಾದ ಸಮರವನ್ನು ಕಡೆಗಣಿಸುತ್ತಿಲ್ಲ. ಇವೆರಡೂ ಒಂದೇ ರೀತಿಯ ಅಪಾಯಗಳೆಂದೂ ಅವುಗಳೆರಡರ ವಿರುದ್ಧವೂ ಹೋರಾಡಿ ಅವುಗಳನ್ನು ಸೋಲಿಸಬೇಕೆಂದೂ ಸಿ. ಪಿ. ಐ. (ಎಂ) ಪ್ರತಿಪಾದಿಸುತ್ತಿದೆ.

ಸಿ.ಪಿ.ಐ.ಮುಂದಾಳುಗಳು ಈಗಲಾದರೂ ತಮ್ಮ 'ಕಡಿಮೆ ಅಪಾಯಕಾರಿ' ಸೂತ್ರವನ್ನು ಕೈಬಿಟ್ಟಲ್ಲಿ ಈಗಲೂ ರಾಷ್ಟ್ರೀಯ ಮಟ್ಟದಲ್ಲಿ ಸರ್ವಾಧಿಕಾರ ವಿರೋಧಿ, ಜಾತ್ಯತೀತ ಬದಲಿ ಶಕ್ತಿಯೊಂದನ್ನು ರಚಿಸುವುದು ಕಷ್ಟವಾಗಲಾರದು. ಇದರಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಗಣನೀಯ ಪಾತ್ರವಹಿಸುವುದೂ ಖಂಡಿತ. ●

....ಜನಸಂಘೀಯರಿಂದ ವಂಚನೆ

[4ನೇ ಪುಟದಿಂದ]

ಸಿದಂತೆ ಇನ್ನೂ ಕೋಮು ಗಲಭೆಗಳನ್ನೂ ಅಲ್ಪಸಂಖ್ಯಾತರ ಮೇಲೆ ಆಕ್ರಮಣವನ್ನೂ ನಡೆಸುತ್ತಲೇ ಇರುವುದು ಖಚಿತ. ತೋಳವು ಕುರಿಯ ಚರ್ಮವನ್ನು ಹೊದ್ದುಕೊಂಡ ಮಾತ್ರಕ್ಕೆ ಕುರಿಯಾಗುವುದಿಲ್ಲ. ಆರೆಸ್ಸೆಸ್-ಜನಸಂಘ ಕೂಟವು ಇನ್ನೂ ತನ್ನ ಹಿಂದೂ ರಾಷ್ಟ್ರ ಸ್ಥಾಪನೆಯ ಯೋಜನೆಯನ್ನು ಬಿಟ್ಟುಕೊಟ್ಟಿಲ್ಲ; ಜಾತ್ಯತೀತ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಮೇಲೆ ಧಾಳಿ ನಡೆಸುವುದನ್ನೂ ಬಿಟ್ಟುಕೊಟ್ಟಿಲ್ಲ.

ಜನತಾ ಪಕ್ಷದೊಳಗೆ ಈಗಲೂ ಉಳಿದಿರುವ ಸೋಶಿಯಲಿಸ್ಟರು ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈಗ ಏನು ನಡೆಯುತ್ತಿದೆಯೆಂಬುದನ್ನು ಗಮನಿಸಬೇಕು. ಆರೆಸ್ಸೆಸ್ ಮತ್ತು ಜನಸಂಘಗಳು ಜನತಾಪಕ್ಷದ ಮೇಲೆ ತಮ್ಮ ಕಪಿಮುಷ್ಟಿಯನ್ನು ಬಿಗಿಗೊಳಿಸುವುದು ಖಚಿತ ಮತ್ತು ಅದನ್ನು ತಮ್ಮ ಉಪಯೋಗಕ್ಕಾಗಿ ಬಳಸಿಕೊಂಡು ತಮ್ಮ ಪ್ರತಿಗಾಮಿ ಧೋರಣೆಗಳನ್ನು ಮುಂದುವರಿಸಿಕೊಂಡು ಹೋಗುವುದೂ ಅಷ್ಟೇ ಖಂಡಿತ. ಹಾಗಾಗಿ ಸೋಶಿಯಲಿಸ್ಟರು ಮತ್ತಿತರರು ಈ ಕೂಡಲೇ ಆರೆಸ್ಸೆಸ್-ಜನಸಂಘ ಪ್ರಾಬಲ್ಯವಿರುವ ಪಕ್ಷದಿಂದ ತಮ್ಮ ಸಂಬಂಧವನ್ನು ಕಡಿದುಕೊಂಡು ದೇಶದ ಇತರ ಜಾತ್ಯತೀತ ಪ್ರಜಾಸತ್ತಾತ್ಮಕ ಹಾಗೂ ಸಮಾಜವಾದಿ ಶಕ್ತಿಗಳ ಜೊತೆ ಸೇರಿ ಸರ್ವಾಧಿಕಾರಿ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಎಲ್ಲ ಇತರ ಶಕ್ತಿಗಳೂ ಒಂದಾಗುವಂತೆ ಹೊಸ ರಾಜಕೀಯ ಮರು ಹೊಂದಾಣಿಕೆಗಾಗಿ ಶ್ರಮಿಸಬೇಕು. ●

...ಕ್ರಾಂತಿಯ ಕಥೆ

[3ನೇ ಪುಟದಿಂದ]

ಭಾವ ಬ್ರಿಟಿಷ್ ಪರವಾದ ಶಕ್ತಿಗಳಿಗೆ ಸಲ್ಲದ ಪ್ರಾಮುಖ್ಯತೆ ಕೊಟ್ಟು ಲಂಡನ್ನಿನಲ್ಲಿ ಕರೆದಿದ್ದ ದುಂಡುಮೇಜಿನ ಪರಿಷತ್ತಿಗೆ ಗಾಂಧಿ ಕಾಂಗ್ರೆಸ್ ಪರವಾಗಿಭಾಗವಹಿಸುವಲ್ಲಿಯವರೆಗೆ ಹೋಯಿತು. ಆದರೆ ಪರಿಷತ್ತು ವಿಫಲವಾಯಿತು. ಬ್ರಿಟಿಷರು ದೊಡ್ಡಪ್ರಮಾಣದಬಂಧನ, ದಮನಕ್ಕೆ ತೊಡಗಿದರು. ಗಾಂಧಿ ಹರಿಜನರಿಗೆ ಪ್ರತ್ಯೇಕ ಮತದಾರ ಕ್ಷೇತ್ರದ ವಿರುದ್ಧ ಮತ್ತುಇನ್ನೊಮ್ಮೆ ಆತ್ಮಶುದ್ಧೀಕರಣಕ್ಕಾಗಿ ಗಾಂಧಿ ಉಪವಾಸ ಹೂಡಿದರು. ಪುನಃ ವೈಯುಕ್ತಿಕ ಸತ್ಯಾಗ್ರಹಕ್ಕೆ ಕರೆಕೊಟ್ಟರು.

(ಮುಂದುವರೆಯುವುದು)

ಎಸ್. ಎಫ್. ಐ. ರಾಜ್ಯ ಸಮಿತಿ ಸಭೆ

ಭಾರತ ವಿದ್ಯಾರ್ಥಿ ಫೆಡರೇಶನ್ನಿನ ರಾಜ್ಯ ಸಮಿತಿಸಭೆ ತಾ. 5-8-1979 ರಂದು ಬೆಂಗಳೂರಿನಲ್ಲಿ ನಡೆಯಿತು. ಕೇಂದ್ರ ಕಾರ್ಯಕಾರಿ ಸಮಿತಿ ಅಧ್ಯಕ್ಷ ಕಾಂ. ಶ್ರೀ ಎಂ. ಎ. ಬೇಬಿಯವರು ಸಭೆಗೆ ಸೂಕ್ತ ಸಲಹೆಗಳನ್ನು ನೀಡಿದರು. ರಾಜ್ಯಸಮಿತಿ ಅಧ್ಯಕ್ಷ ಕಾಂ. ಇಕ್‌ಬಾಲ್ ಹುಸೇನ್‌ರವರು ಜುಲೈ 18ರಿಂದ 20ರ ವರೆಗೆ ನವದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿಸಭೆಯ ತೀರ್ಮಾನಗಳನ್ನು ತಿಳಿಸಿದರು. ನಂತರ ಪ್ರಧಾನ ಕಾರ್ಯದರ್ಶಿಯವರು ರಾಜ್ಯ ಚಟುವಟಿಕೆಗಳ ಬಗ್ಗೆ ವರದಿಯನ್ನು ಮಂಡಿಸಿದರು.

ವರದಿಯ ಚರ್ಚೆಯನಂತರ,ಕೇಂದ್ರ ಸಮಿತಿ ತೀರ್ಮಾನದಂತೆ ಸೆಪ್ಟೆಂಬರ್ 14ರಂದು ಬೇಡಿಕೆ ದಿನಾಚರಣೆಯನ್ನು ಆಚರಿಸಲು ತೀರ್ಮಾನಿಸಲಾಯಿತು. ಧ್ವಜಾರೋಹಣ, ಸಭೆ, ಮೆರವಣಿಗೆ, ಮನವಿಅರ್ಪಣೆ, ಸಹಿಸಂಗ್ರಹಮುಂತಾದ ಕಾರ್ಯಕ್ರಮಗಳನ್ನು ಆ ದಿನ ನಡೆಸಲು ಸಭೆ ನಿರ್ಧರಿಸಿತು.

ಐಕ್ಯ ಹೋರಾಟ :

ದೆಹಲಿಯಲ್ಲಿ ನಡೆದ "ಸರ್ವಾಧಿಕಾರಿ ಮತ್ತು ಕೋಮುವಾದಿ ವಿರೋಧಿ" ವಿದ್ಯಾರ್ಥಿ, ಯುವಜನ ಸಮ್ಮೇಳನದ ತೀರ್ಮಾನದಂತೆ ರಾಜ್ಯದಲ್ಲಿಯೂ ಎಡ ಮತ್ತು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಯುವಜನ ಸಂಘಟನೆಗಳೊಂದಿಗೆ ಒಂದು ಐಕ್ಯ ಹೋರಾಟಕ್ಕಾಗಿ ಕಾರ್ಯಕ್ರಮ ಹಾಕಲು ಸಭೆ ತೀರ್ಮಾನಿಸಿತು.

ರಾಜ್ಯ ಸಮಿತಿ ನಿಧಿ :

ಸೆಪ್ಟೆಂಬರ್ ಅಂತ್ಯದೊಳಗೆ ರಾಜ್ಯ ಸಮಿತಿಗೆ ಹತ್ತು ಸಾವಿರ ರೂ. ನಿಧಿ ಸಂಗ್ರಹಿಸಲು ನಿರ್ಧರಿಸಲಾಯಿತು. ನಿಧಿಯ ಕೋಟಾವನ್ನು ಜಿಲ್ಲಾವಾರು ಘಟಕಗಳಿಗೆ ಹಂಚಲಾಯಿತು.

ಬೇಡಿಕೆ ದಿನಾಚರಣೆ :

ಸೆಪ್ಟೆಂಬರ್ 14ರಂದು ಆಚರಿಸುವ ಬೇಡಿಕೆ ದಿನಾಚರಣೆಗಾಗಿ ಕೆಳಗೆ ಕಾಣಿಸಿದ ಬೇಡಿಕೆಗಳನ್ನು ಮುಂದಿಟ್ಟಿದೆ.

1) ಖಾಸಗಿ ಶಿಕ್ಷಣ ಸಂಸ್ಥೆಗಳು ರಾಷ್ಟ್ರೀಕರಣವಾಗಬೇಕು ಮತ್ತು ಡೊನೇಷನ್ ಪದ್ಧತಿ ರದ್ದಾಗಬೇಕು.

2) ಪಿ. ಯು. ಸಿ. ವರೆಗೆ ಉಚಿತ ಮತ್ತು ಕಡ್ಡಾಯಶಿಕ್ಷಣದೊರೆಯಬೇಕು.

3) ಶಿಕ್ಷಣವನ್ನು ಮಾತೃಭಾಷೆಯಲ್ಲಿ ನೀಡಬೇಕು.

4) ಪರೀಕ್ಷಾ ಪದ್ಧತಿ ಮತ್ತು ಪಠ್ಯಕ್ರಮದಲ್ಲಿ ವೈಜ್ಞಾನಿಕ ಬದಲಾವಣೆಯಾಗಬೇಕು.

5) ಶಿಕ್ಷಣವನ್ನು ಸಂವಿಧಾನದ ರಾಜ್ಯಗಳ ಪಟ್ಟಿಯಲ್ಲಿ ಸೇರಿಸಬೇಕು.

6) ಶಿಕ್ಷಣಕ್ಕಾಗಿ ಬಜೆಟ್ಟಿನಲ್ಲಿ ಶೇ. 10ರಷ್ಟು ಮೀಸಲಿಡಬೇಕು.

7) ಮತದಾನದ ವಯಸ್ಸನ್ನು 18 ವರ್ಷಕ್ಕೆ ಇಳಿಸಬೇಕು.

8) ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕು.

9) ವಿದ್ಯಾರ್ಥಿಗಳು ಸಂಘ ರಚಿಸಿಕೊಳ್ಳಲು ಹಾಗೂ ಸೆನೆಟ್, ಸಿಂಡಿಕೇಟ್‌ಗಳಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಹೊಂದಲು ಅವಕಾಶ ಇರಬೇಕು.

10) ಜನವಿರೋಧಿ ಕಾನೂನುಗಳಾದ ಕೈಗಾರಿಕಾ ಸಂಬಂಧಮಸೂದೆ. ಸ್ಥಾನಬದ್ಧತಾ ಕಾಯಿದೆ ಮುಂತಾದುವನ್ನು ಹಿಂತೆಗೆದುಕೊಳ್ಳಬೇಕು. ●

ಹತ್ತಿಗಿರಣಿ ಕಾರ್ಮಿಕ ಕಂಡ ಸತ್ಯ

[6ನೇ ಪುಟದಿಂದ]

ವಿದ್ರೋಹದ ಜಾಲದಲ್ಲಿ ತಾನೇ ಸಿಲುಕಿ ನಶಿಸುತ್ತಿದೆ ಎಂಬುದನ್ನು ಈ ಹೋರಾಟ ಸ್ಪಷ್ಟಪಡಿಸಿದೆ.

ಎಲ್ಲಾ ವೇದನೆಗಳನ್ನು ಸಹಿಸಿ, ಕಾರ್ಮಿಕರು ಮುಷ್ಕರ ಮುಂದುವರಿಸಿದರು. ಧರಣಿ ಮುಷ್ಕರದಲ್ಲಿ ನಿಗದಿಪಡಿಸಿದ ಸಂಖ್ಯೆಗಿಂತಲೂ ಹೆಚ್ಚಿನವರ ಬಂಧನವಾಯಿತು. ಮಹಿಳಾ ಕಾರ್ಮಿಕರು, ಒಂದು ದಿನದ ಮುಷ್ಕರದ ನೇತೃತ್ವವನ್ನು ತಾವೇ ವಹಿಸಿದರು.

ಈ ಮಧ್ಯೆ ಹೋರಾಟ ಸಮಿತಿಯ ನಾಯಕರು ನ್ಯಾಯವಾದ ಸಂಧಾನವನ್ನು ಕಾಣಲು ಬಿಡುವಿಲ್ಲದಂತೆ ಕೆಲಸ ಮಾಡಿದರು. ಕೊನೆಗೆ, ಪ್ರತಿಯೊಬ್ಬ ಕಾರ್ಮಿಕನಿಗೆ ಪ್ರತಿ ತಿಂಗಳು ರೂ. 54-45 ಪೈಸೆ ಸಂಬಳದ ಹೆಚ್ಚಳ, ಕ್ಯಾಷುಯಲ್ ರಜೆ, ಯಾವುದೇ ಕಾರ್ಮಿಕನ ವಜಾ ಇಲ್ಲದಂತೆ ಗೌರವಯುತವಾದ ಒಪ್ಪಂದಕ್ಕೆ ಮಾಲೀಕರು ಒಪ್ಪಲೇಬೇಕಾಯಿತು. ಕಾರ್ಮಿಕರು ತಮ್ಮ ಜಯದ ಜಯಘೋಷಗಳೊಡನೆ ಐವತ್ತೈದು ದಿನಗಳ ಮುಷ್ಕರವನ್ನು ಅಂತ್ಯಗೊಳಿಸಿದರು. ಇಡೀ ಹೋರಾಟದಲ್ಲಿ ಸುಮಾರು 8000 ಕಾರ್ಮಿಕರು ಜೈಲಿಗೆ ಹೋದರು, ಈ ಪೈಕಿ ಕೊಯಮುತ್ತೂರು ಜಿಲ್ಲೆಯೊಂದರಲ್ಲಿಯೇ ನಾಲ್ಕು ಸಾವಿರ ಕಾರ್ಮಿಕರು ಬಂಧನಕ್ಕೊಳಗಾದರು.

ಈ ರೀತಿ ತಮಿಳುನಾಡು ಕಾರ್ಮಿಕರ ಹೋರಾಟದ ಚರಿತ್ರೆಯಲ್ಲಿ ಒಂದು ಅಧ್ಯಾಯ ಮುಗಿದಂತಾಯಿತು. ●

ಸುಳ್ಯ ತಾಲ್ಲೂಕು ರೈತಸಂಘದ ಸಭೆ

ದ. ಕ. ಜಿಲ್ಲೆಯ ಸುಳ್ಯ ತಾಲ್ಲೂಕು ರೈತಸಂಘದ ಕಮಿಟಿಯ ಸಭೆಯು ಸುಳ್ಯದಲ್ಲಿ ತಾ. 7-8-79 ರಂದು ಕಾಂ. ಸೂರ್ಯನಾರಾಯಣ ಭಟ್‌ರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಗೆ ಹೆಚ್ಚಿನ ಎಲ್ಲಾ ತಾಲ್ಲೂಕು ಸದಸ್ಯರು ಭಾಗವಹಿಸಿದ್ದರು.

ಸುಳ್ಯ ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕಾಂ. ಮೊನಪ್ಪಗೌಡರು ರೈತರ ಸಂಘಟನೆಯ ಬಗ್ಗೆ ಹಾಗೂ ಕೃಷಿ ಕಾರ್ಮಿಕರ ಪ್ರಶ್ನೆಗಳ ಬಗ್ಗೆ ಮಾತನಾಡಿದರು. ಕಾಂ. ಸೂರ್ಯನಾರಾಯಣ ಭಟ್ ದೇಶದ ರಾಜಕೀಯದ ಬಗ್ಗೆ ವಿವರಿಸಿದರು.

ತಾಲ್ಲೂಕಿನ ಕೃಷಿ ಕಾರ್ಮಿಕರ ಹಾಗೂ ರೈತರ ಮತ್ತು ಆಗುಮೆದಾರರ ವಿಚಾರವಾಗಿ ಗಂಭೀರ ಚಳುವಳಿ ನಡೆಸಿದ ಬಳಿಕ, ತಾಲ್ಲೂಕಿನಲ್ಲಿ ರೈತ ಸಂಘವನ್ನು ಬಲಿಷ್ಠವಾಗಿ ಕಟ್ಟುವ ಹಾಗೂ ಪ್ರತಿಗ್ರಾಮದಲ್ಲಿ ರೈತಸಂಘದ ಕಮಿಟಿಗಳನ್ನು ರಚಿಸುವ ಹಾಗೂ ಕೃಷಿ ಕಾರ್ಮಿಕರ ಹಳ್ಳಿಯ ಬಡರೈತರ ದರಕಾಸ್ತು ಪ್ರಶ್ನೆಗಳ ಬಗ್ಗೆ ಬೇಡಿಕೆ ದಿನಾಚರಣೆ ಆಚರಿಸಬೇಕೆಂದು ತೀರ್ಮಾನಿಸಲಾಯಿತು ಅಲ್ಲದೆ, ಹಳಿಯಾಳದಲ್ಲಿ ಪೋಲೀಸರ ಗೋಲಿಬಾರಿಗೆ ತುತ್ತಾಗಿ ಅಸುನೀಗಿದ ಕಾಂ. ಮಾರುತಿ ಪವಾರ್‌ರವರ ನಿಧಿಗೆ, ನಿಧಿ ಸಂಗ್ರಹಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ○

ಹರಿಜನ ಕಾರ್ಮಿಕರಿಂದ ಉಪವಾಸ ಸತ್ಯಾಗ್ರಹ

ತಾತಗುಣಿ ಎಸ್ಟೇಟ್ ಹರಿಜನ ಕಾರ್ಮಿಕರಿಂದ ತಾ. 22-8-79ರಿಂದ ನಮ್ಮ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರ ಮನೆಯ ಮುಂದೆ ಉಪವಾಸ ಸತ್ಯಾಗ್ರಹ ಮಾಡಲು ನಿರ್ಧರಿಸಿದ್ದಾರೆ.

ಕಳೆದ 3 ವರ್ಷಗಳಿಂದ ಈ ಹರಿಜನರು ತಮ್ಮ ಕನಿಷ್ಠ ವೇತನ ಜಾರಿಯಾಗಲು ಹೋರಾಡುತ್ತಿದ್ದು, ಇದುವರೆವಿಗೂ ಅವರ ಬೇಡಿಕೆಗಳು ಈಡೇರುವಲ್ಲಿ ವಿಫಲವಾಗಿದ್ದಾರೆ.

ಲೇಬರ್ ಕಮಿಷನರ್ ಮತ್ತು ಜಿಲ್ಲಾಧಿಕಾರಿಗಳ ಕಣ್ಣೊರೆಸುವ ಮಾತುಕತೆ 13-8-79ಕ್ಕೆ ಮುಗಿದು, ಜಿಲ್ಲಾಧಿಕಾರಿಗಳು ಸರಕಾರಕ್ಕೆ ಬರೆದಿದ್ದೇನೆ ಎಂದಿದ್ದಾರೆ.

ಆದುದರಿಂದ ಬೇಡಿಕೆ ಈಡೇರುವವರೆವಿಗೂ ಈ ಹರಿಜನ ಕಾರ್ಮಿಕರು, ದೇವರಾಜ ಅರಸರ ಮನೆಯ ಮುಂದೆ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ತೊಡಗಲು ತಯಾರಿ ನಡೆಸುತ್ತಿದ್ದಾರೆ.

ಬೇಡಿಕೆಗಳು :

1) ಸರಕಾರ ತಾತಗುಣಿ ಎಸ್ಟೇಟನ್ನು ಪ್ಲಾಂಟೇಷನ್ಎಂದು ಪರಿಗಣಿಸಿ ಆಜ್ಞೆ ಹೊರಡಿಸಬೇಕು.

2) 68 ಹರಿಜನ ಕಾರ್ಮಿಕರ ಮೇಲೆ ವಿನಾಕಾರಣ ಹಾಕಿದ ಮೊಕದ್ದಮೆಯನ್ನು ವಾಪಸ್ಸು ತೆಗೆಯಬೇಕು.

3) ತಾತಗುಣಿ ಎಸ್ಟೇಟಿನಲ್ಲಿರುವ ಎಲ್ಲಾ ಪೋಲೀಸರನ್ನೂ ವಾಪಸ್ಸು ತೆಗೆಯಬೇಕು.

4) ಮುಖ್ಯಮಂತ್ರಿಯವರು ಮಧ್ಯಪ್ರವೇಶಿಸಿ ಹರಿಜನರಿಗೆ ನ್ಯಾಯ ದೊರಕಿಸಕೊಡಬೇಕು.

○

ಸೂರಿ ಮತ್ತು ನಾಯರ್ ಕಾರ್ಮಿಕರ ವಿಕ್ರಮ

ಕೈಗಾರಿಕಾ ಕ್ರೀಡಾ ಕೂಟದಲ್ಲಿ ಸೂರಿ ಮತ್ತು ನಾಯರ್ ಸಂಸ್ಥೆಯ ಕಾರ್ಮಿಕರು ಅದ್ಭುತ ಯಶಗಳಿಸಿ, ಜಿ. ಬಿ. ಐ. ಎ. ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗಳಿಸಿದ್ದಾರೆ. ಸೂರಿ ಮತ್ತು ನಾಯರ್ ಕಾರ್ಮಿಕರು ಜಿ. ಬಿ. ಐ. ಎ. ಫುಟ್‌ಬಾಲ್ ಪ್ರಶಸ್ತಿಯನ್ನೂ ಪಡೆದುಕೊಂಡಿದ್ದಾರೆ.

○

ಸೌದೆ ಬೆಲೆ ಏರಿಕೆಯ ವಿರುದ್ಧ ನಾಗರಿಕ ಸಮಿತಿ

ಶಿವಮೊಗ್ಗದಲ್ಲಿ ತಾ. 8-8-79 ರಂದು ಶ್ರೀ ಎಂ. ಎಸ್. ಕೊಡ್ಗಿಯವರ ಅಧ್ಯಕ್ಷತೆಯಲ್ಲಿ ಸೌದೆ ಬೆಲೆ ಏರಿಕೆಯಾಗಿರುವುದನ್ನು ಖಂಡಿಸಿ ಒಂದು ನಾಗರಿಕ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಶ್ರೀ ಚಂದು ಕುಟ್ಟಿಯವರು ಆಯ್ಕೆಯಾಗಿ ಕೆಳಗಿನ ನಿರ್ಣಯಗಳನ್ನು ಕೈಗೊಂಡರು.

'ಆಳುವ ವರ್ಗದ ಜನ ವಿರೋಧಿ ನೀತಿ ಮತ್ತು ಬಂಡವಾಳಶಾಹಿ ಧೋರಣೆಯಿಂದ, ನಿತ್ಯೋಪಯೋಗಿ ಸಾಮಗ್ರಿಗಳ ಬೆಲೆ ಗಗನಕ್ಕೇರಿದೆ. ಇದರಿಂದ ಬಡವರ ಜೀವನ ಮತ್ತಷ್ಟು ಸಂಕಷ್ಟಕ್ಕೊಳಗಾಗಿರುವ ವೇಳೆಯಲ್ಲಿ ಇದ್ದಕ್ಕಿದ್ದಂತೆ ಸೌದೆ ಬೆಲೆ ರೂ. 119 ಇದ್ದದ್ದು ರೂ. 150 ಕ್ಕೇರಿರುವುದು. ಹುಣ್ಣಿನ ಮೇಲೆ ಬರೆ ಎಳೆದಂತಾಗಿದೆ ಅರಣ್ಯ ಇಲಾಖೆಯವರು ಕಳ್ಳಸಾಗಾಣಿಕೆದಾರರೊಂದಿಗೆ ಶಾಮೀಲಾಗಿ ಅರಣ್ಯಗಳನ್ನು ಲೂಟಿ ಮಾಡುತ್ತಿದ್ದಾರೆ. ಇದರಿಂದಾಗುವ ನಷ್ಟವನ್ನು ಭರ್ತಿಮಾಡಲು ಜನತೆ ಮೇಲೆ ಕರಭಾರ, ಬೆಲೆ ಏರಿಕೆ, ಮುಂತಾದವುಗಳನ್ನು ಹೇರಿ ಜನತೆಯನ್ನು ಶೋಷಣೆ ಮಾಡುವುದನ್ನು ಸರ್ವ ಪಕ್ಷಗಳ ಮತ್ತು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಈ ಸಭೆಯ ಮೂಲಕ ತೀವ್ರವಾಗಿ ಖಂಡಿಸಿವೆ.

●

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ನಕ್ಸಲೀಯರಿಂದ ರೈತರ ಮೇಲೆ ಹಲ್ಲೆ

ಆಂಧ್ರ ಪ್ರದೇಶದ ನೆಲ್ಲಗೊಂಡಾ ಜಿಲ್ಲೆಯ ಸೂರ್ಯಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ನಕ್ಸಲೀಯರ ದೌರ್ಜನ್ಯಗಳು ಕಳೆದ ಎರಡು ವರ್ಷಗಳಿಂದ ಪರಾಕಾಷ್ಠೆಗೆ ಮುಟ್ಟಿವೆ. ಕಳೆದ ತಿಂಗಳು ಜುಲೈ 4ರಂದು ಬಂದೂಕ, ಬರ್ಜಿ, ನಾಡಬಾಂಬುಗಳಿಂದ ರೈತರ ಮೇಲೆ ದಾಳಿ, ದಬ್ಬಾಳಿಕೆ ಮಾಡಿದ್ದರ ಪರಿಣಾಮ ಅದೇ ಪಾರ್ಟಿಯ 33 ಜನರು ಆ ಪಾರ್ಟಿಗೆ ರಾಜಿನಾಮೆ ಪ್ರಕಟಿಸಿದ್ದಾರೆ. ಇದರಿಂದ ಅವಮಾನಗೊಂಡ ನಕ್ಸಲೀಯರು ಗುಂಪು ಕಟ್ಟಿಕೊಂಡು ಪಾರ್ಟಿಯಿಂದ ಹೊರಗಡೆ ಹೋದವರ ಮೇಲೆ ಸೇಡು ತೀರಿಸಿಕೊಳ್ಳಲು ಹಾಗೂ ಮಾರ್ಕ್ಸ್‌ವಾದಿ ಪಕ್ಷದ ನೇತೃತ್ವದ ರೈತಸಂಘಕ್ಕೆ ಸೇರಿದವರ ಮೇಲೆಯೂ ಸೇಡು ತೀರಿಸಿಕೊಳ್ಳುವ ರೀತಿ ಭಯಾನಕವಾಗಿದ.

ರೈತರ ವ್ಯವಸಾಯ ಸಾಮಗ್ರಿಗಳಿಗೆ ತುಂಬಾ ಜಖಂ ಆಗಿದೆ.ಡೀಸಲ್ ಇಂಜಿನ್‌ಗಳನ್ನು ಪುಡಿಪುಡಿ ಮಾಡಿದ್ದಾರೆ. ಹೀಗೆ ನಾಶಮಾಡಿರುವ ರೈತರ ವ್ಯವಸಾಯೋತ್ಪನ್ನಗಳ ನಷ್ಟ ಸುಮಾರು 50ಸಾವಿರಕ್ಕಿಂತ ಹೆಚ್ಚು.

ಇಷ್ಟೇ ಅಲ್ಲದೆ, ಜುಲೈ 25ರಂದು ಶ್ರೀ ಸೋಮನಾರಾಯಣರೆಡ್ಡಿಯವರನ್ನು ಸಂಚು ಮಾಡಿ ಮನೆಯಿಂದ ಹೊರಗೆ ಕರೆದುಕೊಂಡು ಹೋಗಿ ಹೊಡೆಯುತ್ತಿರಬೇಕಾದರೆ,ಆರ್.ಟಿ.ಸಿ. ಬಸ್ ಬಂದದ್ದರಿಂದ ರೆಡ್ಡಿಯವರನ್ನು ಬಿಟ್ಟು ಓಡಿಹೋದರು. ಅವರ ತಲೆ ಬುರುಡೆ ಒಡೆದು ಹೋಗಿ ಪ್ರಜ್ಞೆ ತಪ್ಪಿಹೋಗಿತ್ತು. ಅವರು ಈಗ ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ.

ಕೋಮುವಾದಕ್ಕೆ ರಾಜಕೀಯ ಪ್ರತಿರೋಧ

[ಒಂದನೇ ಪುಟದಿಂದ]

ವನ್ನು ರಾಜ್ಯಾಂಗದಲ್ಲಿ ಸೇರಿಸುವ ಕ್ರಮಕ್ಕೆ ಮುಂದಾದವರಲ್ಲಿ ಚವಾಣ್ ಕೂಡಾ ಒಬ್ಬರು. ಅಲ್ಪಸಂಖ್ಯಾತ ಕೋಮಿಗೆ ಸೇರಿದ ಜನರ ಆಹಾರ, ಆಚಾರ, ವಿಚಾರಗಳ ವಿಷಯದಲ್ಲೂ ಹಸ್ತಕ್ಷೇಪ ನಡೆಸಿ, ಬಹುಸಂಖ್ಯಾತರ ನಂಬಿಕೆಗಳನ್ನು ಅಲ್ಪಸಂಖ್ಯಾತರ ಮೇಲೆ ಬಲವಂತವಾಗಿ ಹೇರಬಯಸುವ ರಾಜಕಾರಣಿಗಳು ಆರೆಸ್ಸೆಸ್ ನಂತಹ ಕೋಮುವಾದಿ ಸಂಘಟನೆಗಳನ್ನು ಸೈದ್ಧಾಂತಿಕವಾಗಿ ಹೇಗೆ ತಾನೆ ಎದುರಿಸಲು ಸಾಧ್ಯ?

ಶಾಲಾ, ಕಾಲೇಜು ಆವರಣಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಆರೆಸ್ಸೆಸ್ ಶಾಖೆಗಳು ಕವಾಯತು ನಡೆಸುವುದನ್ನು ನಿಷೇಧಿಸಲಾಗುವುದೆಂದೂ ಈ ಬಗ್ಗೆ ಉತ್ತರ ಪ್ರದೇಶ ಹಾಗೂ ಕೇರಳ ಸರಕಾರಗಳು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಲಾಗುವುದೆಂದೂ ಗೃಹಮಂತ್ರಿಗಳು ಹೇಳಿದ್ದಾರೆ. ಈ ಬಗೆಯ ಕ್ರಮಗಳು ಪರಿಣಾಮಕಾರಿಯಾಗಿ ನಡೆದರೆ ಅದು ನಿಜವಾಗಿ ಒಂದು ಸಾಧನೆಯೇ ಸರಿ. ಆದರೆ ಕೋಮುವಾದಿ, ಪ್ರತಿಗಾಮಿ ಸಿದ್ಧಾಂತಗಳ ವಿರುದ್ಧ ಹೋರಾಟ ಇಷ್ಟಕ್ಕೇ ಸಮಾಪ್ತಿಯಾಗಲಾರದು. ಶಾಲೆ, ಕಾಲೇಜುಗಳಲ್ಲಿ ಮಕ್ಕಳಿಗೆ ಕಲಿಸಲಾಗುತ್ತಿರುವ ಪಠ್ಯಪುಸ್ತಕಗಳಲ್ಲಿ ಧಾರ್ಮಿಕ ವಿಚಾರಗಳೇ ತುಂಬಿವೆ. ಸರಕಾರೀ ಕಚೇರಿಗಳಲ್ಲೂ ಸಾರ್ವಜನಿಕ ಸಂಸ್ಥೆಗಳಲ್ಲೂ ಅಲ್ಲಿನ ಮೇಲಧಿಕಾರಿಗಳ ಆಶ್ರಯದಲ್ಲಿ ಒಂದಲ್ಲೊಂದು ಬಗೆಯ ಧಾರ್ಮಿಕ ಆಚರಣೆ, ಸಮಾರಂಭಗಳು ಈಗಲೂ ನಡೆಯುತ್ತಿವೆ. ಸರಕಾರದ ಅಧಿಕಾರಿಗಳೂ, ಮಂತ್ರಿಗಳೂ, ರಾಜಕಾರಣಿಗಳೂ ಬಾಯಿಮಾತಿನಲ್ಲಿ ಜಾತ್ಯತೀತತೆಯನ್ನು ಸಾರುತ್ತಿರುವಾಗಲೇ ಮತೀಯ, ಧಾರ್ಮಿಕ ಸಮಾರಂಭಗಳಲ್ಲಿ ಪ್ರಭುತ್ವದ ಪ್ರತಿನಿಧಿಗಳಾಗಿ ಭಾಗವಹಿಸುತ್ತಾರೆ. ಆಕಾಶವಾಣಿ, ಪತ್ರಿಕೆ ಮತ್ತು ಸಾರ್ವಜನಿಕ ಸಂಪರ್ಕ ಮಾಧ್ಯಮಗಳಲ್ಲಿ ಧಾರ್ಮಿಕ ಪ್ರವಚನಗಳು ಬೋಧನೆಗಳೂ ಒಂದೇ ಸಮನೆ ನಡೆಯುತ್ತಿವೆ. ಬಹುಸಂಖ್ಯಾತರು ಹಿಂದೂಗಳಾಗಿರುವ ಈ ರಾಷ್ಟ್ರದಲ್ಲಿ ಇವೆಲ್ಲ ಬಹುಸಂಖ್ಯಾತರಿಗೇ ಅನುಕೂಲಕರವಾಗಿರುತ್ತವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ದೇಶದ ಪ್ರತಿಯೊಬ್ಬ ಪ್ರಜೆಗೂ ತನಗೆ ಬೇಕಾದ ಧರ್ಮವನ್ನವಲಂಬಿಸುವ, ಧಾರ್ಮಿಕ ಆಚರಣೆಗಳನ್ನು ಮಾಡುವ ಸ್ವಾತಂತ್ರ್ಯ ಇದೆ; ಇರಬೇಕು. ಆದರೆ ಇವೆಲ್ಲ ಆತನ ಖಾಸಗಿ ಆಚರಣೆಗಳಾಗಬೇಕೇ ಹೊರತು ಇದರಲ್ಲಿ ಸರಕಾರದ ಅಧಿಕಾರಿಗಳು, ಆಡಳಿತಯಂತ್ರ, ಸಾರ್ವಜನಿಕ ಸಂಸ್ಥೆಗಳು ಪಾಲುಗೊಳ್ಳಕೂಡದು.

ದುರದೃಷ್ಟವಶಾತ್ ನಮ್ಮ ದೇಶದಲ್ಲಿ ಜಾತ್ಯತೀತತೆ, ಧರ್ಮನಿರಪೇಕ್ಷತೆಯೆಂದರೆ 'ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶ ನೀಡುವುದು' ಎಂಬ ಅರ್ಥ ನೀಡಲಾಗುತ್ತಿದೆ. ಹಾಗೆಯೇ ಎಲ್ಲಾ ಧರ್ಮಗಳ ಮುಂದಾಳುಗಳಿಗೂ ತಮ್ಮ ಧರ್ಮಪ್ರಚಾರ ಮಾಡಲು ಮುಕ್ತ ಅವಕಾಶ ಕೊಡಲಾಗಿದೆ. ಸಹಜವಾಗಿಯೇ ಇದು ಬಹುಸಂಖ್ಯಾತ ಧರ್ಮಕ್ಕೆ ಸೇರಿದ ಜಾತೀಯವಾದಿ, ಕೋಮುವಾದಿ ಸಂಘಟನೆಗಳಿಗೆ ತುಂಬಾ ಅನುಕೂಲವಾಗಿದೆ. ಭಾರತ ದೇಶವನ್ನು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸಬೇಕೆಂಬ ತನ್ನ ಇಚ್ಛೆಯನ್ನು ಆರೆಸ್ಸೆಸ್ ಬಹಿರಂಗವಾಗಿಯೇ ಸಾರಿಕೊಂಡಿರುವುದನ್ನು ಅದರ ಮುಂದಾಳುವಾಗಿದ್ದ ಬಿ. ಗೋಲ್ವಾಲ್ಕರ್ ಅವರ ಬರಹಗಳಲ್ಲಿ ಕಾಣಬಹುದು. ಹಿಂದೂಗಳಲ್ಲದವರು ಭಾರತೀಯರೇ ಅಲ್ಲ ಎನ್ನುವಷ್ಟರ ಮಟ್ಟಿಗೂ ಈ ಕೋಮುವಾದಿಗಳ ಉದ್ಧಟತನ ಸಾಗಿದೆ. ಹಿಂದೂಗಳಲ್ಲದವರನ್ನು ಭಾರತೀಕರಣಗೊಳಿಸಬೇಕು ಎನ್ನುವ ಅಪಾಯಕಾರಿ ಧೋರಣೆಗಳೂ ಇವರಲ್ಲಿವೆ. ಅಲ್ಪಸಂಖ್ಯಾತರ ಮೇಲೆ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ದಬ್ಬಾಳಿಕೆಗೆ ಇದು ಅವಕಾಶ ಮಾಡಿಕೊಟ್ಟಿದೆ.

ಕೋಮುವಾದಿ ಸಂಘಟನೆಗಳನ್ನು ರಾಜಕೀಯವಾಗಿ ಎದುರಿಸಿ ಸೋಲಿಸುವ ತಮ್ಮ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ವೇಳೆ ವೈ. ಬಿ. ಚವಾಣ್ ಅವರು ಈ ಎಲ್ಲ ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದು ಅವರನ್ನು ಕೇಳಿಕೊಳ್ಳುತ್ತೇವೆ. ಅದೇರೀತಿ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿರುವ ಜಾತ್ಯತೀತ ಶಕ್ತಿಗಳೂ ಈ ಸಮಸ್ಯೆಯ ಬಗ್ಗೆ ಗಹನವಾಗಿ ಯೋಚಿಸಬೇಕು. ಜನಸಂಘದಲ್ಲೂ ಇರಬಹುದಾದ ವಿಚಾರಶೀಲ ವ್ಯಕ್ತಿಗಳು ತಮ್ಮ ಪಕ್ಷದ ಈವರೆಗಿನ ಧೋರಣೆಯಿಂದಾಗಿ ಆಗಿರುವ ಅನಾಹುತ ಎಷ್ಟು ಎಂಬುದನ್ನು ಈಗಲಾದರೂ ಅರಿತುಕೊಳ್ಳಬೇಕು. ಈ ಬಗ್ಗೆ ಇತ್ತೀಚೆಗೆ ಅಟಲ ಬಿಹಾರಿ ವಾಜಪೇಯಿ ಬರೆದಿರುವ ಲೇಖನ-ಜನಸಂಘೀಯರೂ ತಮ್ಮ ನಿಲುವಿನ ಕುರಿತು ಮಾಡಿಕೊಳ್ಳುತ್ತಿರಬಹುದಾದ ಆತ್ಮಾವಲೋಕನಕ್ಕೆ ಮುನ್ನುಡಿಯಾಗಲಿ ಎಂದು ಆಶಿಸಬಹುದೇ?

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಳಿಯ ಸದಸ್ಯರ ಗಮನಕ್ಕೆ

ಸಿ. ಐ. ಟಿ. ಯು. ರಾಜ್ಯಮಂಡಳಿಯ ಸದಸ್ಯರಿಗೆ ಆಗಸ್ಟ್ 31 ಮತ್ತು ಸೆಪ್ಟಂಬರ್ 1ರಂದು ಒಂದು ಶಾಲೆ ನಡೆಯುತ್ತದೆ. ಕಾಂ. ಎಂ.ಕೆ. ಪಂಧೆ ಪ್ರಧಾನ ಬೋಧಕರು. ವಿಷಯ: "ಜಾಗತಿಕ ಕಾರ್ಮಿಕರ ಚಳುವಳಿಯ ಇತಿಹಾಸ". ಶಾಲೆಯು ಕೆ.ಜಿ.ಎಫ್.ನ ರಾಬರ್ಟ್ಸನ್ ಪೇಟೆಯಲ್ಲಿ 31ರ ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗುತ್ತದೆ.

ಕೆ.ಜಿ.ಎಫ್.ನಲ್ಲಿ ಸೆಪ್ಟಂಬರ್ 2 ರಂದು ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿಯ ಸಭೆ ಮತ್ತು 3 ರಂದು ರಾಜ್ಯಮಂಡಳಿಯ ಸಭೆ ನಡೆಯುತ್ತವೆ. ರಾಜ್ಯಮಂಡಳಿಯ ಎಲ್ಲಾ ಸದಸ್ಯರೂ, ಆಮಂತ್ರಿತರೂ ಆಗಸ್ಟ್ 30ರ ಸಂಜೆ ಅಥವಾ 31ರ ಬೆಳಿಗ್ಗೆ ಕೆ.ಜಿ.ಎಫ್. ತಲುಪಬೇಕು

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ
ಸಿ.ಐ.ಟಿ.ಯು., ಕರ್ನಾಟಕ ರಾಜ್ಯಸಮಿತಿ.

ಸಂಪಾದಕೀಯ

[ಒಂದನೇ ಪುಟದಿಂದ]

ತಡೆಹಿಡಿಯುವ ಹಿಂದಿನ ಸರ್ಕಾರದ ತೀರ್ಮಾನವನ್ನು ರದ್ದುಪಡಿಸಿದೆ. ರಿಸರ್ವ್ ಬ್ಯಾಂಕಿನ ನೌಕರರ ಬಗ್ಗೆ ಹೊರಡಿಸಿದ ಸುಗ್ರೀವಾಜ್ಞೆಯನ್ನು ರದ್ದುಗೊಳಿಸಿದೆ. ರೈಲ್ವೆ ನೌಕರರ ಬೋನಸ್ ಬೇಡಿಕೆಯನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಹೇಳಿದೆ. ಕೈಗಾರಿಕಾಸಂಬಂಧ ಮಸೂದೆಯನ್ನು ಕೈ ಬಿಡುವ ಸೂಚನೆಯನ್ನೂ ಕೊಟ್ಟಿದೆ. ವಿಶೇಷ ನ್ಯಾಯಾಲಯಗಳನ್ನು ಮುಂದುವರೆಸುವ ನಿರ್ಧಾರವನ್ನು ವ್ಯಕ್ತಪಡಿಸಿದೆ. ಆದರೆ ಈ ಸರಕಾರದ ವರ್ಗಗುಣದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಗೆ ಯಾವ ಸಂಶಯವೂ ಇಲ್ಲ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ನಿಲುಮೆ ಮೂಲಭೂತವಾಗಿ ಕೋಮುವಾದಿ ಶಕ್ತಿಗಳನ್ನೂ, ಸರ್ವಾಧಿಕಾರಿ ಶಕ್ತಿಗಳನ್ನೂ ವಿರೋಧಿಸುತ್ತಾ ಪ್ರಜಾಪ್ರಭುತ್ವ ಶಕ್ತಿಗಳಿಗೆ ಬೆಂಬಲ ನೀಡುವುದಾಗಿದೆ. ಇದು ಯಶಸ್ವಿಯಾಗಿ ನಡೆಯಬೇಕಾದರೆ ಸರಕಾರದ ಧೋರಣೆಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕಾಗಿದೆ. ಅಂತಹ ಕಾರ್ಯಕ್ರಮವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯು ಜಲಂಧರ್ ಅಧಿವೇಶನದಲ್ಲಿ ಮಂಡಿಸಿದೆ. ಅದಕ್ಕೆ ತನ್ನ ಹೋರಾಟವನ್ನು ಮುಂದುವರೆಸುವುದು.

ಈಗಿನ ಪರಿಸ್ಥಿತಿಯಲ್ಲಿ ಚರಣ್ ಸಿಂಗ್‌ರವರ ಸರಕಾರಕ್ಕೆ ಬೆಂಬಲ ನೀಡುವ ಪಾರ್ಟಿಯ ತೀರ್ಮಾನವನ್ನು ಎಲ್ಲ ಪ್ರಜಾಪ್ರಭುತ್ವವಾದಿಗಳೂ, ಎಡಪಕ್ಷಗಳೂ ಸ್ವಾಗತಿಸುತ್ತದೆಂದು ನಾವು ನಂಬಿದ್ದೇವೆ. ○

ಲಾಠಿ ಏಟು – ಅಶ್ರುವಾಯು – ಬಂಧನ

[ಒಂದನೇ ಪುಟದಿಂದ]

ಬದ್ಧ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ ಎಂದರು.

8 ಘಂಟೆಗಳು ಮಾತ್ರ ಕಾರ್ಮಿಕರಿಂದ ದುಡಿಸಿಕೊಳ್ಳುವುದರಿಂದ ನಷ್ಟವಾಗುತ್ತದೆ ಎಂಬ ವಾದವನ್ನು ಒಪ್ಪದ ಸಿ.ಐ.ಟಿ.ಯು. ಮುಖಂಡರು ಕೆಲಸಗಾರನಿಗೆ 8 ಘಂಟೆ ಕೆಲಸ, 8 ಘಂಟೆ ವಿಶ್ರಾಂತಿ, 8 ಘಂಟೆ ನಿದ್ರೆ ಮಾಡುವ ಕಾನೂನುಬದ್ಧ ಸೌಲಭ್ಯವನ್ನು ಕೊಟ್ಟರೆ ಆತ ಶುಚಿಯಾಗಿ ಮತ್ತು ಆರೋಗ್ಯವಂತನಾಗಿ ಇನ್ನೂ ಹೆಚ್ಚು ಉತ್ಸಾಹದಿಂದ ದುಡಿದು ಒಳ್ಳೆಯ ಸೇವೆ ನೀಡುತ್ತಾನೆ ಎಂದು ಮನದಟ್ಟು ಮಾಡಿಕೊಟ್ಟರು.

ಕಾರ್ಮಿಕರ ನ್ಯಾಯಬದ್ಧ ಬೇಡಿಕೆಗಳನ್ನು ಸರ್ಕಾರವು ಅಕ್ಟೋಬರ್ 2ನೇ ತಾರೀಖಿನೊಳಗೆ ಈಡೇರಿಸದಿದ್ದಲ್ಲಿ ಅಂದು ಮತ್ತೆ ಹೋಟೆಲ್ ಕಾರ್ಮಿಕರು ಸಾಮೂಹಿಕ ರಜೆ ಹಾಕುವರೆಂತಲೂ, ಆಗಲೂ ಸರ್ಕಾರ ಕೇಳದಿದ್ದರೆ ಜನವರಿ 26ರಂದು ಮತ್ತೆ ಸಾಮೂಹಿಕ ರಜೆ ಹಾಕುವರೆಂತಲೂ ವಿ.ಜೆ.ಕೆ. ನಾಯರ್ ಸರ್ಕಾರಕ್ಕೆ ಮತ್ತು ಹೋಟೆಲ್‌ಉದ್ಯಮಪತಿಗಳಿಗೆ ಎಚ್ಚರಿಕೆ ನೀಡಿದರು.

ವೈಯುಕ್ತಿಕ ದ್ವೇಶ ಅಲ್ಲ:

ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಎಸ್. ಸೂರ್ಯನಾರಾಯಣ ರಾವ್ ಅವರು ಹೋಟೆಲ್ ಕಾರ್ಮಿಕರ ಹೋರಾಟ ವೈಯುಕ್ತಿಕವಾಗಿ ಯಾರೊಬ್ಬರ ವಿರೋಧವಾದದ್ದಲ್ಲವೆಂದೂ, ಸಾಮಾನ್ಯಶಾಸನಬದ್ಧ ಸೌಲಭ್ಯಗಳಿಂದ ವಂಚಿತರಾಗಿದ್ದ ಕಾರ್ಮಿಕರು ಈಗ ಸಂಘಟಿತರಾಗಿ ನ್ಯಾಯಬದ್ಧ ಸೌಲಭ್ಯಕ್ಕಾಗಿ ಹೊರಟಿದ್ದಾರೆ. ಇವರನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲವೆಂದರು.

ದೇಶದ ರಾಷ್ಟ್ರೀಯ ಹಬ್ಬದ ದಿವಸವಾದ ಆಗಸ್ಟ್ 15ರಂದು ದುಡಿಸಿಕೊಂಡ ಕೆಲವು ಹೋಟೆಲ್‌ಮಾಲೀಕರುಗಳಿಂದಅಲ್ಲಿನ ಕಾರ್ಮಿಕರಿಗೆ ದುಪ್ಪಟ್ಟು ಸಂಬಳವನ್ನು ಕೊಡಿಸಬೇಕು ಎಂದು ಸಿ.ಐ.ಟಿ.ಯು ಅಧ್ಯಕ್ಷರು ಕಾರ್ಮಿಕ ಇಲಾಖೆಯನ್ನು ಒತ್ತಾಯಿಸಿದರು.

ಶಾಂತಿಯುತವಾಗಿ ಮೆರವಣಿಗೆ ನಡೆಸಿದ ಹೋಟೆಲ್ ಕಾರ್ಮಿಕರ ಮೇಲೆ ಲಾಠಿಚಾರ್ಜು ಅಶ್ರುವಾಯು ಪ್ರಯೋಗಿಸಿದ ಪೋಲೀಸ್‌ಕ್ರಮವನ್ನು ಅತ್ಯುಗ್ರವಾಗಿ ಖಂಡಿಸಿದ ಕಾರ್ಮಿಕ ನಾಯಕರು ಪೋಲೀಸರಿಗೂ ಸಂಘ ಕಟ್ಟಿಕೊಳ್ಳಲು ಸಲಹೆ ಮಾಡಿದರು ಮತ್ತು ಪೋಲೀಸರ ನ್ಯಾಯಬದ್ಧ ಬೇಡಿಕೆಗಳಿಗೆ ಸಿ.ಐ.ಟಿ.ಯು. ಬೆಂಬಲವಿದೆಎಂದು ಪ್ರಕಟಿಸಿದರು.

ಸಿ.ಐ.ಟಿ.ಯು. ಮುಖಂಡ ಕುಲಕರ್ಣಿಯವರು ಮಾತನಾಡಿ ದೇಶದ ಸ್ವಾತಂತ್ರ್ಯ ದಿನದಂದು ಹೋಟೆಲ್ ಕಾರ್ಮಿಕರು ತಮ್ಮ ಕಷ್ಟಕಾರ್ಪಣ್ಯಗಳನ್ನು ಜನತೆಯಮುಂದೆಯೂ – ಸರಕಾರದ ಮುಂದೆಯೂ ಇಟ್ಟು ಅವುಗಳ ಪರಿಹಾರಕ್ಕೆ ಹೋರಾಟ ಮಾರ್ಗವನ್ನು ಹಿಡಿದಿದ್ದೇವೆ ಎಂದು ತೋರಿಸಿಕೊಡುವ ಮೂಲಕ ಸ್ವಾತಂತ್ರ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಿದರು ಎಂದು ಹೇಳಿದರು.

ಸಭೆಯನ್ನುದ್ದೇಶಿಸಿ ರೈತಸಂಘದ ಮುಖಂಡ ಪಿ. ಜಗನ್ನಾಥ್, ಎಸ್.ಎಫ್.ಐ. ರಾಜ್ಯ ಶಾಖೆಯ ಅಧ್ಯಕ್ಷ ಇಕ್ಬಾಲ್ ಹುಸೇನ್, ಎ.ಐ.ಟಿ.ಯು.ಸಿ.ನ ಬಾಬು ಶೆಟ್ಟಿ ಮತ್ತು ಸುಧಾಕರ ಬನಂಜೆಅವರು ಮಾತನಾಡಿದರು.

ಹೋಟೆಲ್ ಕಾರ್ಮಿಕಸಂಘಗಳ ಕ್ರಿಯಾ ಸಮಿತಿಯ ಅಧ್ಯಕ್ಷ ಶ್ರೀಪತಿರಾವ್ ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪರಿಸರ

ನಮ್ಮದು ಒಂದು ರೀತಿಯ ವಿಚಿತ್ರ ದೇಶ. ಉತ್ಪಾದನೆಯಲ್ಲಿ ತೊಡಗಿರುವವರಿಗೆ ಇಲ್ಲಿ ಸ್ವಲ್ಪವೂ ಸ್ಥಾನವಿಲ್ಲ. ಸ್ವಲ್ಪ ಕೆಲಸಮಾಡುವವರಿಗೆ ಮರ್ಯಾದೆ ಇದೆ. ಏನೊಂದೂ ಕೆಲಸ ಮಾಡದೆ ಇರುವವರಿಗೆ ಇಲ್ಲಿ ಸಕಲ ಭೋಗಗಳು, ಸನ್ಮಾನ, ಗೌರವಗಳು ದೊರೆಯುತ್ತಿವೆ.

ಜಗಜೀವನರಾಮ್

ಬೀದಿಬೀದಿಯಲ್ಲಿ ಭಿಕ್ಷೆ ಬೇಡುವ ನಮ್ಮವರ ನಾಲಿಗೆಯಲ್ಲಿ ಇಂಡಿಯಾ ಸತ್ತಿದೆ. ದೇಶದ 64 ಕೋಟಿ ಜನರಲ್ಲಿ 34 ಕೋಟಿಗೆ ಹೊಟ್ಟೆ ಬಟ್ಟೆಗಿಲ್ಲ, ಮಲಗಲು ಮನೆ ಇಲ್ಲ. ಆದ್ದರಿಂದ ಸ್ವಾತಂತ್ರ ದಿನಾಚರಣೆಯನ್ನು ಶ್ರೀಮಂತರು ಮಾತ್ರ ಸಂತೋಷದಿಂದ ಆಚರಿಸಬೇಕಷ್ಟೆ. ಬಡವರಾದ ನಮಗೆ ಇದು ಕಪ್ಪುದಿನ; ಶೋಷಣೆ ವಿರೋಧಿ ದಿನ.

(ಆಗಸ್ಟ್ 15 ರಂದು ಬಂಡಾಯ ಸಾಹಿತ್ಯ ಸಂಘಟನಾ ಮತ್ತು ದಲಿತ ಸಂಘರ್ಷ ಸಮಿತಿಗಳು ಹೊರಡಿಸಿದ ಕರಪತ್ರದಲ್ಲಿ)

ಸ್ವಾತಂತ್ರ್ಯಾನಂತರ ಆದ ಅಭಿವೃದ್ಧಿಯ ಎಲ್ಲ ಫಲ ವಿದೇಶಿ ಬಂಡವಾಳಗಾರರ, ದೇಶದ ಏಕಸ್ವಾಮ್ಯ ಮನೆತನಗಳ ಮತ್ತು ದೊಡ್ಡ ಜಮೀನ್ದಾರರ ಪಾಲಾಗಿರುವುದರಿಂದ ದೇಶವು ಏನನ್ನಾದರೂ ಸಾಧಿಸಿದೆ ಎಂದು ಹೇಳುವುದು ತಪ್ಪಾಗುತ್ತದೆ.

"ಇಂಡಿಯನ್ ಎಕ್ಸ್‌ಪ್ರೆಸ್"ನ ಸ್ವಾತಂತ್ರ್ಯೋತ್ಸವ ಸಂಚಿಕೆಗೆ ಕೊಟ್ಟ ಸಂದರ್ಶನದಲ್ಲಿ ಇ. ಎಂ. ಎಸ್.

ನನ್ನ ತಂದೆಯನ್ನು ಮೊದಲೇ ಕೊಂದು ನಂತರ ನೇಣುಗಟ್ಟಲಾಯಿತು.

—(ಪಾಕಿಸ್ತಾನದ ಮಿಲಿಟರಿ ಸರ್ಕಾರದ ಬಗ್ಗೆ ಪಾಕ್‌ನ ಮಾಜೀ ಪ್ರಧಾನಿ ಭುಟ್ಟೋ ಮಗಳು ಬೆನಜಿರ್ ಭುಟ್ಟೋ.)

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053. Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT